ಐಕ್ಯರಂಗ

ರೂ. 2.00

ಜೂನ್ 15-21, 1998

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 25



ಬೆಂಗಳೂರಿನಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನ

ಏಳಿ, ಎದ್ದೇಳಿ - ನಾಲ್ದೆಸೆಗಳಿಂದಲೂ ಬರುತ್ತಿರುವ ಧಾಳಿಗಳನ್ನು ಹಿಮ್ಮೆಟ್ಟಿಸಿ

ದೇಶದ ಮಹಿಳೆಯರಿಗೆ ಸುಶೀಲಾ ಗೋಪಾಲನ್ ಕರೆ

ಒಂದೆಡೆ ಉದಾರೀಕರಣದ ನೀತಿಗಳ ಹೊಡೆತ, ಇನ್ನೊಂದೆಡೆ ಕೋಮುವಾದಿಗಳ ಅಬ್ಬರ ಪಾಳೆಯಗಾರಿ ಮೌಲ್ಯಗಳನ್ನು ಉಳಿಸುವುದೇ ತನ್ನ ಕರ್ತವ್ಯವೆಂದು ಬಗೆದಿದೆಯೇ ಎನ್ನುತ್ತಿರುವ ಹೊಸ ಸರಕಾರ, ಇವುಗಳ ನಡುವೆ ಹೆಚ್ಚುತ್ತಿರುವ ಹಿಂಸೆ, ಅತ್ಯಾಚಾರ - ಇವೆಲ್ಲವುಗಳ ವಿರುದ್ಧ ದೇಶದ ಮಹಿಳೆಯರು ಜಾಗೃತರಾಗಿ ಹೀಗೆ ನಾಲ್ದೆಸೆಗಳಿಂದಲೂ ಬರುತ್ತಿರುವ ಧಾಳಿಗಳನ್ನೆದುರಿಸಿ ಮಹಿಳೆಯರ ಬೇಡಿಕೆಗಳಿಗಾಗಿ ಐಕ್ಯ ಹೋರಾಟ ನಡೆಸಬೇಕಾದರೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಹಾಗೂ ಕೇರಳದ ಎಡ ಪ್ರಜಾಪ್ರಭುತ್ವರಂಗ ಸರಕಾರದ ಕೈಗಾರಿಕಾ ಮಂತ್ರಿಯೂ ಆಗಿರುವ ಸುಶೀಲಾ ಗೋಪಾಲನ್ ಕರೆ ನೀಡಿದ್ದಾರೆ. ಜೂನ್ ೧೧ರಂದ ಬೆಂಗಳೂರಿನಲ್ಲಿ ಸಂಘಟನೆಯ ಐದನೇ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸುತ್ತಾ ಕೇರಳದ ಕಾರ್ಮಿಕ ಆಂದೋಲನ, ಮಹಿಳಾ ಆಂದೋಲನದ ಈ ಹಿರಿಯ ಮುಖಂಡರು ಮಾತನಾಡುತ್ತಿದ್ದರು.

ಇದು ಈ ಶತಮಾನದ ಕೊನೆಯ ಸಮ್ಮೇಳನ. ಗೌರವಶಾಲಿ ಇತಿಹಾಸ ಹೊಂದಿದ ನಾವು ಮುಂದಿನ ಶತಮಾನಕ್ಕೆ ಹೇಗೆ ಹೋಗುತ್ತೇವೆ? ಸ್ವಾತಂತ್ರ್ಯ ದೊರೆತು 50 ವರ್ಷಗಳಾದವು. ಈ ಹೋರಾಟದ ಆಶಯಗಳು ಈಡೇರಿವೆಯೇ ಎಂದು ಪರಿಶೀಲಿಸಿದ ಸುಶೀಲಾ ಗೋಪಾಲನ್ ರವರು ಪ್ರಸ್ತುತ ಭಾರತೀಯ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳತ್ತ ಒಂದೊಂದಾಗಿ ಗಮನ ಸೆಳೆದರು.

ಈಗಿನ ಸರಕಾರ ಪಾಳೆಯಗಾರಿ ಮೌಲ್ಯಗಳನ್ನು ಚುರುಕುಗೊಳಿಸುವುದು ತನ್ನ ಕೆಲಸವೆಂಬಂತೆ ವರ್ತಿಸುತ್ತಿದೆ ಎಂದು ಟೀಕಿಸಿದ ಅವರು ಇತ್ತೀಚೆಗೆ ಕೇಂದ್ರ ಮಂತ್ರಿಗಳಾದ ಮುರುಳಿಮನೋಹರ ಜೋಷಿಯವರು ಮಹಿಳೆಯರ ಸ್ಥಾನ ಮನೆಯಲ್ಲಿ ಎಂದು ಹೇಳಿವುದನ್ನು ನೆನಪಿಸಿದರು.

ಉದ್ಯೋಗಗಳಲ್ಲಿ ಮಹಿಳೆಯರ ಪಾಲು ಇಳಿಯುತ್ತಿದೆ, ಹೊಸ ಆರ್ಥಿಕ ನೀತಿಯ ಪ್ರಮುಖ ಧಾಳಿ ಸಾರ್ವಜನಿ ವಲಯದ ಮೇಲೆ. ಇದರ ಮೊದಲ ದುಷ್ಪರಿಣಾಮ ಮಹಿಳೆಯ ಮೇಲೆ. ಏಕೆಂದರೆ ಸಂಘಟಿತ ವಲಯದಲ್ಲಿ ದುಡಿಯುತ್ತಿರುವ 37 ಲಕ್ಷ ಮಹಿಳೆಯರಲ್ಲಿ 24 ಲಕ್ಷ ಮಹಿಳೆಯರು ಈ ವಲಯದಲ್ಲಿದ್ದಾರೆ. ಸಾಂಪ್ರದಾಯಿಕ ವಲಯಗಳಲ್ಲೂ ಕೆಲಸ ಕಳಕೊಳ್ಳುತ್ತಿದ್ದಾರೆ. ಆದರೆ ಈ ಸಲದ ಬಜೆಟ್ಟಿನಲ್ಲಿ ಮಹಿಳೆಯರ ಈ ಸಮಸ್ಯೆಗೆ ಏನೂ ಪರಿಹಾರವಿಲ್ಲ.

'ನಾರೀಮುಕ್ತಿ' ಎಂಬುದು ಪಾಶ್ಚಾತ್ಯ ಪ್ರಭಾವಕ್ಕೊಳಗಾದವರ ಪ್ರಚಾರ ಎನ್ನುವ ಕೋಮುವಾದಿಗಳು ನಾರೀ ಶಕ್ತಿಯ ಮಾತಾಡುತ್ತಾರೆ. ದುರ್ಗಾವಾಹಿನಿಗಳನ್ನು ಕಟ್ಟುತ್ತಾರೆ. ಈ ಮೂಲಕ ಮಹಿಳೆಯರ ಗಮನವನ್ನು ತಮ್ಮ ನಿಜವಾದ ಸಮಸ್ಯೆಯಿಂದ ಬೇರೆಡೆಗೆ ಸೆಳೆಯುವ, ಮಹಿಳೆಯರ ಐಕ್ಯತೆಯನ್ನು ಮುರಿಯುವ ಪ್ರಯತ್ನ ನಡೆಸಿದ್ದಾರೆ. ಈ ಕೋಮುವಾದವನ್ನು ಎದುರಿಸುವುದು, ಐಕ್ಯತೆಯ ಮೇಲೆ ಈ ಪ್ರಹಾರವನ್ನು ಎದುರಿಸುವುದು ಮಹಿಳಾ ಆಂದೋಲನದ ಕರ್ತವ್ಯ ಎಂದು ಸುಶೀಲಾ ಗೋಪಾಲನ್ ಹೇಳಿದರು.

ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ಬಗ್ಗೆ ಮಾತನಾಡುತ್ತಾ ನಮ್ಮ ಹೋರಾಟಗಳಿಂದಾಗಿ ಹಲವು ಕಾನೂನುಗಳು ರಚನೆಯಾಗಿದ್ದರೂ ಅವುಗಳು ಜಾರಿಯಾಗುತ್ತಿಲ್ಲವೆಂದು ಖೇದ ವ್ಯಕ್ತಪಡಿಸಿದರು. ಇತ್ತೀಚೆಗೆ ಮಂಗಳೂರಿನಲ್ಲಿ ಒಬ್ಬ ಅತ್ಯಾಚಾರಿಯ ಅತ್ಯಾಚಾರಗಳನ್ನು ತಾಳಲಾರದೆ, ಪೋಲೀಸ್-ನ್ಯಾಯಾಲಯದ ನೆರವು ದೊರೆಯದಾದಾ ಮಹಿಳೆಯರೇ ಎಲ್ಲರೂ ಒಟ್ಟಾಗಿ ಆತನನ್ನು ಕಲ್ಲಿನಲ್ಲಿ ಜಜ್ಜಿ ಕೊಂದ ಘಟನೆಯನ್ನು ಪ್ರಸ್ತಾಪಿಸುತ್ತಾ ನಾವು ಈ ರೀತಿ ಕಾನೂನನ್ನು ನಮ್ಮ ಕೈಗಳಲ್ಲಿ ತಗೊಳ್ಳ ಬಯಸುವುದಿಲ್ಲ, ಆದರೆ ನ್ಯಾಯಾಲಯ, ಪೋಲೀಸ್ ನೆರವು ಸಿಗದಿದ್ದಾಗ ಇಂತಹ ಪರಿಸ್ಥಿತಿ ಏರ್ಪಡುತ್ತದೆ ಎಂದರು.

ಪಂಚಾಯತೀ ರಾಜ್ಯ ಮಹಿಳಾ ಆಂದೋಲನದ ಅತ್ಯಂತ ದೊಡ್ಡ ಗೆಲವು ಎಂದ ಸುಶೀಲಾ ಗೋಪಾಲನ್ 10 ಲಕ್ಷ ಚುನಾಯಿತ ಮಹಿಳೆಯರು ಗ್ರಾಮಗಳಲ್ಲಿ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದಾರೆ, ಆದರೆ ಸಂಸತ್ತಿನಲ್ಲಿ ಇನ್ನೂ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಕೇವಲ 42. ಈ ಹಿನ್ನೆಲೆಯಲ್ಲಿ ಮೂರನೇ ಒಂದು ಭಾಗ ಮೀಸಲಾತಿ ಈಗ ಮಹಿಳಾ ಆಂದೋಲನದ ಪ್ರಧಾನ ಬೇಡಿಕೆ ಎಂದು ಸಾರಿದರು.

ಇದಕ್ಕೆ ಮೊದಲು ಸಂಘಟನೆಯ ಪ್ರಜಾಪ್ರಭುತ್ವ, ಸಮಾನತೆಯ ಮತ್ತು ಮಹಿಳಾ ವಿಮೋಚನೆಯ ಘೋಷಣೆಗಳನ್ನು ಹೊತ್ತ ಸಂಘಟನೆಯ ಕೆಂಪು ನಕ್ಷತ್ರದ ಬಿಳಿ ಬಾವುಟವನ್ನು ಬೆಂಗಳೂರಿನ ಪುರಭವನದ ಮುಂದೆ ಹಾರಿಸುವ ಮೂಲಕ 5ನೇ ರಾಷ್ಟ್ರೀಯ ಸಮ್ಮೇಳನ ಆರಂಭವಾಯಿತು. ಸಮ್ಮೇಳನಕ್ಕೆ ಕಲಾತ್ಮಕವಾಗಿ ಸಜ್ಜುಗೊಂಡಿದ್ದ ಪುರಭವನ ಮಿನಿಭಾರತ ದಂತಾಗಿತ್ತು. ದೇಶದ ಮೂಲೆ- ಮೂಲೆಗಳಿಂದ ಬಂದ ಹತ್ತಾರು ಭಾಷೆಗಳನ್ನಾಡುವ, ಕಿರಿವಯಸ್ಸಿನಿಂದ ಹಿರಿಯ ವಯಸ್ಸಿನವರೆಗಿನ 800ರಷ್ಟು ಮಹಿಳಾ ಪ್ರತಿನಿಧಿಗಳಿಂದ ತುಂಬಿ ಹೋಗಿತ್ತು. 'ನಾವೆಲ್ಲಾ ಒಂದು' ಎಂಬ ಭಾವನೆ ಅವರೆಲ್ಲರ ಮೊಗಗಳಲ್ಲಿ ಎದ್ದು ಕಾಣುತ್ತಿತ್ತು. ಭಾರತದ ವಿಭಿನ್ನ ಭಾಷೆಗಳಲ್ಲಿ ಆಗಾಗ ಅದು ಘೋಷಣೆಗಳಾಗಿ ಹೊರಹೊಮ್ಮುತ್ತಿತ್ತು.

ಧ್ವಜಾರೋಹಣದ ನಂತರ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುವುದರೊಂದಿಗೆ ಸಮ್ಮೇಳನದ ಉದ್ಘಾಟನಾ ಅಧಿವೇಶನ ಆರಂಭವಾಯಿತು. ಕ್ರಾಂತಿಕಾರಿಗಳೊಂದಿಗೆ ಆರಂಭವಾದ ಅಧಿವೇಶನದ ಮೊದಲ ಕಲಾಪ ಹುತಾತ್ಮರಿಗೆ, ಮಡಿದ ಸಂಗಾತಿಗಳಿಗೆ ಶ್ರದ್ಧಾಂಜಲಿ, ಸುಭಾಷ್ ಚಂದ್ರ ಬೋಸರ ಆಝಾದ್ ಹಿಂದ್ ಸೇನೆಯ ಸೇನಾನಿ, ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಶ್ರದ್ಧಾಂಜಲಿ ನಿರ್ಣಯವನ್ನು ಮಂಡಿಸಿದರು. ಕಳೆದ ಸಮ್ಮೇಳನದ ನಂತರ ನಿಧನರಾದ ಹಿರಿಯ ಮುಖಂಡರಾದ ಗೋದಾವರಿ ಪರಳೇಕರ (ಸಮ್ಮೇಳನದ ಆವರ ಇವರ ಹೆಸರನ್ನು ಹೊತ್ತು ನಿಂತಿತ್ತು), ಇಎಂಎಸ್ ಮತ್ತಿತರರನ್ನು, ಮಹಿಳಾ ಸಂಘಟನೆಯ, ಕಾರ್ಮಿಕ, ರೈತರ ಹೋರಾಟಗಳಲ್ಲಿ ಪ್ರಾಣ ಬಲಿದಾನ ನೀಡಿದ ಮಧುರೈನ ಲೀಲಾವತಿ, ಅಸ್ಸಾಂನ ಸಾಗರಿಕಾ ಮತ್ತಿತರ ಸಂಗಾತಿಗಳನ್ನು ನೆನಪಿಸಿಕೊಳ್ಳಲಾಯಿತು. ಕಿಕ್ಕಿರಿದು ತುಂಬಿದ್ದ ಟೌನ್‌ಹಾಲ್‌ನ್ನು ಎರಡು ನಿಮಿಷ ಮೌನ ಆವರಿಸಿತು. ಹುತಾತ್ಮರ ನೆನಪು ಮುಂದಿನ ಹೋರಾಟಗಳಿಗೆ ಸದಾ ಸ್ಪೂರ್ತಿಯ ಸೆಲೆ ತಾನೆ?

5ನೇ ರಾಷ್ಟ್ರೀಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಪ್ರಖ್ಯಾತ ನಿರ್ದೇಶಕ ಎಂ.ಎಸ್.ಸತ್ಯು ಪ್ರತಿನಿಧಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ಹೂದೋಟಗಳ ನಗರಿಯಾದ, ಈಗ ಎಲೆಕ್ಟ್ರಾನಿಕ್ ಸಿಟಿಯೆನಿಸಿರುವ ಬೆಂಗಳೂರು ಹಲವಾರು ಮಹಿಳಾ ಉದ್ಯಮಿಗಳನ್ನು ನೀಡಿದ, ಜತೆಗೆ ಅಸಂಘಟಿತ ವಲಯದಲ್ಲಿ ಅಸಂಖ್ಯ ಮಹಿಳೆಯರು ದುಡಿಯುತ್ತಿರುವ ನಗರ, ದೇಶದಲ್ಲೇ ಅತ್ಯಂತ ಹೆಚ್ಚು ದುಡಿಯುವ ಮಹಿಳೆಯರಿರುವ ನಗರ ಎಂದರು.

ಉದ್ಘಾಟನೆಯ ನಂತರ ಸ್ವಾತಂತ್ರ್ಯ ಹೋರಾಟದ ಸುವರ್ಣ ಜಯಂತಿಯ ಸಂದರ್ಭದಲ್ಲಿ ನಡೆಯುತ್ತಿರುವ ಈ ಸಮ್ಮೇಳನದಲ್ಲಿ ಈಗ ಈ ಸಂಘಟನೆಯ ಮುಖಂಡತ್ವದಲ್ಲಿರುವ ಏಳು ಹಿರಿಯ ಮಹಿಳೆಯರನ್ನು ಸನ್ಮಾನಿಸುವ ಕಾರ್ಯಕ್ರಮ ಎಲ್ಲರ ಹೃದಯಸ್ಪರ್ಶಿಸಿದ ಕಾರ್ಯಕ್ರಮ (ವಿವರಕ್ಕೆ 3ನೇ ಪುಟ ನೋಡಿ) ಮತ್ತು ಹುತಾತ್ಮರಾದ ಮಧುರೈನ ಲೀಲಾವತಿಯ ಮಗಳಾದ ಕಲಾವತಿಯನ್ನು ಪರಿಚಯಿಸುವ ಇನ್ನೊಂದು ಹೃದಯಸ್ಪರ್ಶಿ ಕಾರ್ಯಕ್ರಮ.



ಬಿಜೆಪಿ-ಲೋಕಶಕ್ತಿ ಕೂಟದ ಲೆಕ್ಕಾಚಾರ ತಲೆಕೆಳಗೆ

ಪಿ.ರಾಮಚಂದ್ರರಾವ್

ಇತ್ತೀಚೆಗೆ ಜೂನ್ 3 ರಂದು ನಡೆದ ಏಳು ಉಪ ಚುನಾವಣೆಗಳ ಫಲಿತಾಂಶವು ಬಿಜೆಪಿ-ಲೋಕಶಕ್ತಿ ಕೂಟದ ಎಲ್ಲಾ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡಿದ್ದಾರೆ ಕರ್ನಾಟಕದ ಎಚ್ಚೆತ್ತ ಜನತೆ!

ಅಣುಬಾಂಬುಗಳನ್ನು ಏಕಾಏಕಿ ಸಿಡಿಸಿ ತೀರಾ ಅತಿರೇಕದ ದೇಶಾಭಿಮಾನವನ್ನು ಕೆರಳಿಸಿ ಒಂದೆಡೆ ತಮ್ಮ ಮಿತ್ರ ಪಕ್ಷಗಳ ಒತ್ತಡಗಳಿಂದ ತಮ್ಮನ್ನು 'ಬಚಾವ್' ಮಾಡುವುದಕ್ಕಾಗಿ, ಇನ್ನೊಂದೆಡೆ ಅಗ್ಗದ ಪ್ರಚಾರವನ್ನು ಪಡೆಯುವುದಕ್ಕಾಗಿ ಬಿಜೆಪಿ ತಂತ್ರಗಳನ್ನು ಹೂಡಿತ್ತು. ಅದೇ ಸಮಯದಲ್ಲಿ ದೇಶದಾದ್ಯಂತ ಹಾಗೂ ಕರ್ನಾಟಕದಲ್ಲಿ ಉಪ ಚುನಾವಣೆಗಳು ನಡೆದುದರಿಂದ ತಮಗೂ, ಕರ್ನಾಟಕದಲ್ಲಿ ತಮ್ಮ ಕೂಟಕ್ಕೂ 'ಬಹಳಷ್ಟುಲಾಭ' ಆಗಬಹುದು ಎಂದು ಲೆಕ್ಕ ಹಾಕಿದ್ದರು ಬಿಜೆಪಿಯವರು, ಕರ್ನಾಟಕದಲ್ಲಿ ಲೋಕಶಕ್ತಿ ಪಕ್ಷದವರೂ ಕೂಡ.

ಆದರೆ, ದೇಶದ ಜನತೆ ಮಾತ್ರ ಬೇರೆ ತರ ಆಲೋಚನೆ ಮಾಡಲು ಶುರು ಮಾಡಿ ತಮ್ಮ ತೀರ್ಪನ್ನು ಬಿಜೆಪಿಯ ವಿರುದ್ಧ ಹಾಗೂ ಕರ್ನಾಟಕದಲ್ಲಿ ಬಿಜೆಪಿ-ಲೋಕಶಕ್ತಿ ಕೂಟದ ವಿರುದ್ಧ ಕೊಟ್ಟರು.

ಜನತೆಯ ತೀರ್ಪು ದೇಶದಲ್ಲಿ ಕಾಂಗ್ರೆಸ್(ಐ) ಮತ್ತಿತರ ಜಾತ್ಯಾತೀತ ಪಕ್ಷಗಳಿಗೆ ಮತಗಳು, ಬಿಜೆಪಿ ಮತ್ತಿತರ ಕೂಟವು 2ನೇ ಸ್ಥಾನಕ್ಕೆ ದೂಡುವ ತೀರ್ಪು.

ಕರ್ನಾಟಕದಲ್ಲಿ ಪ್ರಚಾರ ಎಷ್ಟಿತ್ತೆಂದರೆ ಬಿಜೆಪಿ-ಲೋಕಶಕ್ತಿಕೂಟವು ಅತ್ಯಧಿಕ ಸೀಟುಗಳನ್ನು ಈ ಉಪಚುನಾವಣೆಯಲ್ಲಿ ಪಡೆಯುವುದರಿಂದಾಗಿ, ಜನತಾದಳದ ಜೆ.ಎಚ್.ಪಟೇಲರ ಸರಕಾರಕ್ಕೆ ಬೆಂಬಲ ಕೊಡುತ್ತಿರುವ ಜನತಾದಳದ ಶಾಸಕರು ಸಾರಾಸಗಟಾಗಿ ಜನತಾದಳವನ್ನು ತ್ಯಜಿಸಿ ಬಿಜೆಪಿ-ಲೋಕಶಕ್ತಿ ಕೂಟವನ್ನು ಸೇರುವುದು - ಆ ನಂತರ ಜೆ.ಎಚ್.ಪಟೇಲರ ಸರಕಾರದ 'ಅವಮಾನಕರ ಪತನ'ವಾಗುವುದು ಎಂದು.

ಆದರೆ, ಜನತೆ ಈ ಆಶಾಗೋಪುರಗಳನ್ನು ಸಂಪೂರ್ಣವಾಗಿ ಕೆಡಹಿದರು. ಅವರು ಜನತಾದಳಕ್ಕೆ 3 ಸೀಟುಗಳನ್ನು ಕೊಟ್ಟು ಜನತಾದಳ ಸರಕಾರವನ್ನು ಉರುಳಿಸುವುದನ್ನು ತಡೆದರು. ಶ್ರೀ ರಾಮಕೃಷ್ಣ ಹೆಗ್ಗಡೆಯವರ ಲೋಕಶಕ್ತಿ ಪಕ್ಷಕ್ಕೆ 'ಕೋಕ್' ಕೊಟ್ಟು ಸಂಪೂರ್ಣ ಸೋಲಿಸಿದರು. 'ನೀವು ಬೇಗನೆ ಎಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಮತೀಯವಾದೀ ಬಾಂಬು-ಖೋರ ಬಿಜೆಪಿಯನ್ನು ತ್ಯಜಿಸಿ - ಪುನಃ ಜಾತ್ಯಾತೀತ ದಾರಿಗೆ ಹಿಂತಿರುಗಿ ಬನ್ನಿರಿ" ಎಂದು ಕರ್ನಾಟಕದ

ಪುಟ 8 ಕ್ಕೆ

ಜೂನ್ 15 ರಂದು ಕೇಂದ್ರ ಬಜೆಟ್ ವಿರುದ್ಧ ಸಿಪಿಐ(ಎಂ), ಸಿ.ಪಿ.ಐ., ರಾಜ್ಯ ರೈತಸಂಘದ ಜಂಟಿ ಹೋರಾಟ

ಕೇಂದ್ರದ ಬಿಜೆಪಿ ಸರ್ಕಾರದ ಬಜೆಟ್ ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನ ಸಾಮಾನ್ಯರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ ಎಂದಿರುವ ಈ ಮೂರು ಪಕ್ಷಗಳು ಜೂನ್ 15 ರಂದು ತಾಲೂಕು, ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ಹಾಗೂ ರಸ್ತೆ ತಡೆ ನಡೆಸಲಾಗುವುದೆಂದು ಪ್ರತಿಕಾಗೋಷ್ಠಿಯಲ್ಲಿ ಸಿಪಿಐ(ಎಂ)ನ ಜಿ.ಎನ್ ನಾಗರಾಜ್ ತಿಳಿಸಿದರು.

ದೇಶದ ಕೃಷಿಹಾಗೂ ಕೈಗಾರಿಕಾ ಉತ್ಪನ್ನಗಳನ್ನು ಬಿಕ್ಕಟ್ಟಿಗೆ ನೂಕುವ ಆಮದು ಮತ್ತು ರಫ್ತು ನೀತಿ ಸಮರ್ಥಿಸುವ ಬಜೆಟ್. ಗ್ರಾಮೀಣಾಭಿವೃದ್ಧಿಗೆ ಶೇ. 60 ರಷ್ಟು ಯೋಜನೆ ವೆಚ್ಚ ನೀಡುತ್ತೇವೆ ಎಂದು ಘೋಷಿಸಿ ಈಗ ಸ್ವಲ್ಪ ಹಣವನ್ನೂ ಬಿಡುಗಡೆ ಮಾಡದೆ ವಂಚಿಸಿದೆ ಕೇಂದ್ರದ ಆಯವ್ಯಯ ಎಂದು ಕೆ.ಎಸ್. ಪುಟ್ಟಯ್ಯ ಹೇಳಿದರು.

ಕೇಂದ್ರ ಸರ್ಕಾರದ ಈ ದ್ವಿಮುಖ ನೀತಿಯ ವಿರುದ್ಧ ಐಕ್ಯ ಹೋರಾಟವೆ, ಮದ್ದು ಎಂದ ಸಿಪಿಐನ ರಾಜ್ಯ ಕಾರ್ಯದರ್ಶಿ ಎಂ. ಸಿ.ವೆಂಕಟರಾಮ್ ಘೋಷಿಸಿದರು ಪ್ರಥಮ ಬಾರಿಗೆ ಮೂರು ಪಕ್ಷಗಳು ಜಂಟಿ ಹೋರಾಟ ನಡೆಸುತ್ತಿರುವುದು ಶ್ರಮಿಕ ವರ್ಗದಲ್ಲಿ ಹೊಸ ಆಶಾ ಭಾವನೆ ಮೂಡಿಸಿದೆ.

ಪೆಟ್ರೋಲ್ ಬೆಲೆಯ ಹೆಚ್ಚಳ: ಬಿಜೆಪಿಯೊಳಗಿನ ಅರಾಜಕತೆಯ ಪ್ರತಿಫಲನ



ಜಿ.ಎಸ್.ಮಣಿ

ಬಿಜೆಪಿ ಸರ್ಕಾರ ಎಂತಹ ಆಡಳಿತ ನಿರ್ವಹಣೆ ಮಾಡುತ್ತದೆ ಎಂಬುದಕ್ಕೆ ಈ ಪೆಟ್ರೋಲ್ ಬೆಲೆ ಹೆಚ್ಚಳದ ಘಟನೆ ಒಂದು ಉತ್ತಮ ಉದಾಹರಣೆ. ಬಿಜೆಪಿಯೊಳಗಿನ ಅರಾಜಕತೆಯ ಅಸಮರ್ಥತೆಯ ಪ್ರತೀಕ.

ಹಣಕಾಸು ಮಂತ್ರಿ ಶ್ರೀ ಯಶವಂತ ಸಿನ್ಹಾ ಅವರು ತಮ್ಮ ಬಜೆಟ್ ಭಾಷಣದಲ್ಲಿ ಭಾರತದ ರಸ್ತೆಗಳನ್ನು ಉತ್ತಮ ಗೊಳಿಸುವುದಕ್ಕಾಗಿ ಹೆಚ್ಚಿನ ಹಣದ ಅವಶ್ಯಕತೆ ಇದೆ. ಇಂದಿನ ಸಂದರ್ಭದಲ್ಲಿ ಇಂತಹ ಹಣ ಸಂಗ್ರಹಣೆಯ ಉದ್ದೇಶದಿಂದ ಪೆಟ್ರೋಲಿನ ದರವನ್ನು ಲೀಟರೊಂದಕ್ಕೆ ಒಂದು ರೂಪಾಯಿಯಂತೆ ಹೆಚ್ಚಿಸಲಾಗುತ್ತದೆ. ಈ ಒಂದು ರೂಪಾಯಿಯ ಸಂಗ್ರಹಣೆಯನ್ನು ಅಂತರ್ರಚನಾ ಸೌಲಭ್ಯಗಳ ಸೃಷ್ಟಿಗೆ ಬಳಸಲಾಗುತ್ತದೆ ಎಂದು ಹೇಳಿದ್ದರು.

ಪೆಟ್ರೋಲಿಯಂ ಬೆಲೆ ಹೆಚ್ಚಳ ಸಾಮಾನ್ಯವಾಗಿ ರಾತ್ರಿ 12 ಗಂಟೆಯ ಸಮಯದಲ್ಲಿ ಜಾರಿಗೆ ಬರುತ್ತದೆ. ಜೂನ್ 1 ರಂದು ಬಜೆಟ್ ಮಂಡನೆಯಾದ್ದರಿಂದ ಆ ದಿನವೇ ರಾತ್ರಿ 12 ಗಂಟೆಯಿಂದ ಬೆಲೆ ಹೆಚ್ಚಳ ಜಾರಿಗೆ ಬಂತು. ಆದರೆ ದೇಶದಾದ್ಯಂತ ವಿವಿಧ ಕಡೆಗಳಲ್ಲಿ ಒಂದು ಲೀಟರ್ ಪೆಟ್ರೋಲಿಗೆ ಸುಮಾರು ನಾಲ್ಕು ರೂಪಾಯಿಗಳಷ್ಟು ಹೆಚ್ಚಾಯಿತು. ಪತ್ರಿಕೆಗಳಲ್ಲಿ ಮಾಧ್ಯಮಗಳ ಮೂಲಕ ಲೀಟರಿಗೆ ಒಂದೇ ರೂಪಾಯಿಯ ಬೆಲೆ ಹೆಚ್ಚಳ ಎಂದು ತಿಳಿದುಕೊಂಡಿದ್ದ ಗ್ರಾಹಕರು ಪೆಟ್ರೋಲ್ ಬಂಕಿನವರೊಂದಿಗೆ ಜಗಳವಾಡಿದರು. ಕೊನೆಗೂ ಗ್ರಾಹಕರು ಹೆಚ್ಚಿನ ಹಣ ಕಳೆದುಕೊಳ್ಳಬೇಕಾಯಿತು.

ಮರುದಿನ ಲೋಕಸಭೆಯಲ್ಲಿ ಗಲಾಟೆಯುಂಟಾಗಿ ಯಶವಂತ ಸಿನ್ಹಾ ಅವರೇ ಈ ಬಗ್ಗೆ ಸ್ಪಷ್ಟೀಕರಣ ನೀಡಿದರು. ಅವರ ಪ್ರಕಾರ ಒಂದೇ ರೂಪಾಯಿ ಬೆಲೆ ಹೆಚ್ಚಿಸಿರುವುದು. ಸ್ಥಳೀಯ ತೆರಿಗೆ ಇತ್ಯಾದಿಗಳೂ ಸೇರಿ ಈ ಹೆಚ್ಚಳ ಒಂದು ರೂಪಾಯಿಗಿಂತಲೂ ಸ್ವಲ್ಪ ಹೆಚ್ಚಾಗುತ್ತದೆ ಎಂದು ಹೇಳಿದರು.

ಹಾಗಿದ್ದರೆ ನಾಲ್ಕು ರೂಪಾಯಿಗಳ ವರೆಗಿನ ಹೆಚ್ಚಳ ಯಾಕಾಯಿತು? ಇದಕ್ಕೆ ಸಿನ್ಹಾ ಅವರ ವಿವರಣೆ :ಪೆಟ್ರೋಲಿಯಂ ಮಂತ್ರಾಲಯ ಮತ್ತು ಹಣಕಾಸು ಮಂತ್ರಾಲಯಗಳ ನಡುವೆ ಆ ವಿಷಯ ಅರ್ಥೈಸುವಲ್ಲಿ ವ್ಯತ್ಯಾಸವಾಗಿದೆ. ಆದ್ದರಿಂದಲೇ ಈ ಗೊಂದಲ ಎಂದರು.

ಒಂದು ದಿನ ಗ್ರಾಹಕರು ಹೆಚ್ಚಿನ ಹಣ ತೆತ್ತು ಪೆಟ್ರೋಲ್ ಕೊಂಡು ನಷ್ಟ ಅನುಭವಿಸಿದರಲ್ಲ ಅದಕ್ಕೇನು ಮಾಡುವುದು ಎಂದು ವಿರೋಧ ಪಕ್ಷಗಳು ಕೇಳಿದಾಗ 'ಆ ಹಣವನ್ನು ಹಿಂದಿರುಗಿಸುವ ದಾರಿಯಿಲ್ಲವಾದ್ದರಿಂದ ಆ ಹಣವನ್ನೂ ಅಂತರ್ರಚನಾ ನಿಧಿಗೆ ಸೇರಿಸಿಕೊಳ್ಳಲಾಗುವುದು" ಎಂಬ ವಿವರಣೆ ನೀಡಿದರು.

ಅಷ್ಟೇನೂ ದೊಡ್ಡದಲ್ಲದ ಒಂದು ವಿಷಯವನ್ನು ಈ ಸರ್ಕಾರದ ನಿರ್ವಹಿಸಿದ ರೀತಿ ಈ ಸರ್ಕಾರ ಸಾಮರ್ಥ್ಯದ ಬಗ್ಗೆ ಕನ್ನಡಿ ಹಿಡಿದಂತಿಲ್ಲವೇ? ಇಂತಹ ಸರ್ಕಾರ ಅಣು ಸಾಧನ ಪರೀಕ್ಷಣೆಯಂತಹ ವಿಷಯವನ್ನು ವಿಶ್ವ ಶಾಂತಿಯ ವಿಷಯವನ್ನು ಹೇಗೆ ನಿರ್ವಹಿಸಬಹುದು? ನೀವೇ ಊಹಿಸಿಕೊಳ್ಳಿ.

ಪೆಟ್ರೋಲಿನಂತೆ ಯೂರಿಯಾ ಬೆಲೆ

ಪೆಟ್ರೋಲಿನ ದರವನ್ನು ಹೆಚ್ಚಿಸಿದಂತೆ ಯೂರಿಯಾ ಬೆಲೆಯನ್ನು ಸಹ ಬಜೆಟ್ಟಿನಲ್ಲಿ ಪ್ರತಿ ಕಿಲೋಗ್ರಾಮಿಗೆ ಒಂದು ರೂಪಾಯಿಯಂತೆ ಹೆಚ್ಚಿಸುವ ಮಾತನ್ನು ಯಶವಂತ ಸಿನ್ಹಾ ಆಡಿದ್ದರು. ಆದರೆ ಬಿಜೆಪಿಯ ಮಿತ್ರ ಪಕ್ಷಗಳೂ ಸೇರಿದಂತೆ ಎಲ್ಲ ಕಡೆಯಿಂದ ಈ ಬಗ್ಗೆ ತೀವ್ರ ಒತ್ತಡ ಬಂತು. ಈಗ ಈ ಹೆಚ್ಚಳವನ್ನು ಪ್ರತಿ ಕಿಲೋಕ್ಕೆ ಒಂದು ರೂಪಾಯಿಯ ಬದಲು ಐವತ್ತು ಪೈಸೆಗೆ ಇಳಿಸಲಾಗಿದೆ. 'ಅವಸರದಲ್ಲಿ ಕೆಲಸ ಮಾಡಿ ನಿಧಾನವಾಗಿ ಪಶ್ಚಾತಾಪ ಪಡುವುದೆಂದರೆ'ಇದೇ ಅಲ್ಲವೇ?

ಕಪ್ಪು ಹಣದ ಖೂಳರಿಗೆ ಮತ್ತೊಂದು ಕ್ಷಮಾಧಾನ ಯೋಜನೆ

ಇದು ಸದ್ದಿಲ್ಲದೆ ಬಂದ ಯೋಜನೆ. 1998-99 ರ ಬಜೆಟ್ಟಿನಲ್ಲಿ ಈ ಯೋಜನೆಯ ಪ್ರಸ್ತಾಪವಿದೆ. ಮೇಲ್ನೋಟಕ್ಕೆ ಈ ಯೋಜನೆಯಲ್ಲಿ ವಿಶೇಷವೇನೂ ಕಾಣುವುದಿಲ್ಲ. ತಜ್ಞರ ಪ್ರಕಾರ ಇದು ಕಪ್ಪು ಹಣವಿರುವವರನ್ನು ರಕ್ಷಿಸುವ ಯೋಜನೆ.

ಯೋಜನೆ ಸರಳವಾದದ್ದು. ಈ ಹಿಂದೆ ಉಡುಗೊರೆ ನೀಡುವವರು ಉಡುಗೊರೆ (ಗಿಫ್ಟ್) ತೆರಿಗೆ ನೀಡಬೇಕಾಗುತ್ತಿತ್ತು. ಆದ್ದರಿಂದ ಕಪ್ಪು ಹಣವನ್ನು ಉಡುಗೊರೆ ರೂಪದಲ್ಲಿ ಬಿಳಿ ಮಾಡುವ ಸಾಧ್ಯತೆಯಿರಲಿಲ್ಲ. ಈಗ ಈ ಉಡುಗೊರೆ ತೆರಿಗೆಯನ್ನು ತೆಗೆದು ಹಾಕಲಾಗಿದೆ. ಬದಲಿಗೆ ವರಮಾನ ತೆರಿಗೆಯಂತೆ ತೆರಿಗೆ ತೆತ್ತರೆ ಆಯಿತು. ಶೇ 30 ರಷ್ಟು ವರಮಾನ ತೆರಿಗೆ ಹಿಂದಿನ ಸ್ವಯಂ ಘೋಷಣಾ ಯೋಜನೆಯಂತೇ ಇದೆ.

ಲೆಕ್ಕ ತಜ್ಞರುಗಳ ಪ್ರಕಾರ ಗುಪ್ತ ವರಮಾನವಿದ್ದವರು (ಕಪ್ಪು ಹಣವಿರುವವರು ಎಂದು ಓದಿಕೊಳ್ಳಿ) ತಮಗೆ ಬೇಕಾದವರಿಗೆ ಉಡುಗೊರೆ ನೀಡುವ ಮೂಲಕ ಈ ಕಪ್ಪು ಹಣವನ್ನು ಬಿಳಿ ಮಾಡಿಕೊಳ್ಳಬಹುದು. ಯಾವುದೇ ಪ್ರಶ್ನೆಯಿಲ್ಲ ತಂಟೆ ತಕಾರಾರಿಲ್ಲ. ಬೇಕಾದಾಗ ಕಪ್ಪು ಹಣ ಬಿಳಿ ಸುಲಭದ ಯೋಜನೆಯಲ್ಲವೇ?

ಸಣ್ಣ ಕೈಗಾರಿಕೆಗಳಿಗೆ ಹೊಡೆತ ನೀಡಲಿರುವ ಆಮದು ಸುಂಕ

ದೇಶೀ ಉದ್ದಿಮೆಗಳಿಗೆ ರಕ್ಷಣೆ ನೀಡುವ ಮಾತನಾಡುತ್ತಾ ಕೇಂದ್ರ ಸರ್ಕಾರ ತನ್ನ ಬಜೆಟ್ಟಿನಲ್ಲಿ ಶೇ 8 ರಷ್ಟು ಆಮದು ಸುಂಕವನ್ನು ಹೇರಿದೆ. ಸಾರಸಗಟಾಗಿ ಹೇರಿರುವ ಈ ಆಮದು ಸುಂಕ ಕೆಲವು ಸಣ್ಣ ಕೈಗಾರಿಕೆಗಳಿಗೆ ಹೊಡೆತ ನೀಡಲಿದೆ.

ನೂರಕ್ಕೂ ಹೆಚ್ಚು ಸರಕುಗಳು ಸಣ್ಣ ಕೈಗಾರಿಕೆಗಳಲ್ಲಿ ಉತ್ಪನ್ನವಾಗುವಂತವು. ಇವುಗಳಲ್ಲಿ ಹಲವು ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಸ್ತುಗಳು ಸೇರಿವೆ. ಈ ವಸ್ತುಗಳ ಉತ್ಪಾದನೆಗೆ ಬೇಕಾದ ಕಚ್ಚಾ ಸಾಮಗ್ರಿ ಆಮದಿನ ಮೂಲಕವೇ ಬರಬೇಕು. ಈಗ ಆಮದಿನ ಮೇಲೆ ಶೇ 8 ರಷ್ಟು ಸುಂಕ ವಿಧಿಸಿರುವುದರಿಂದ ಕಚ್ಚಾ ಸಾಮಗ್ರಿಯ ಬೆಲೆ ಹೆಚ್ಚುತ್ತದೆ.

ಇದರ ಜೊತೆಗೇ ಉತ್ಪಾದನಾ ವೆಚ್ಚ ಹೆಚ್ಚಿ ಈ ಸಣ್ಣ ಕೈಗಾರಿಕೆಗಳು ರೋಗಗ್ರಸ್ಥವಾಗುವ ಸಾಧ್ಯತೆ ಹೆಚ್ಚಾಗಿದೆ.

ಹೀಗೆ ದೇಶೀ ಉದ್ದಿಮೆಗಳಿಗೆ ರಕ್ಷಣೆ ನೀಡುವ ಕ್ರಮ ಕೆಲವು ಸಣ್ಣ ಕೈಗಾರಿಕೆಗಳಿಗೆ ಮಾರಕವಾಗುವ ಸಾಧ್ಯತೆಗಳಿವೆ. ಕೂಲಂಕುಷವಾಗಿ ವಿಚಾರ ಮಾಡದೇ ನಿರ್ಧಾರ ತೆಗೆದುಕೊಳ್ಳುವುದೇ ಬಿಜೆಪಿಯ ಗುಣವಿರಬಹುದೇ?

ಮುಂದುವರಿದ ಅಮೆರಿಕದ ಸಾಮ್ರಾಜ್ಯಶಾಹಿತ್ವ

ಅಮೆರಿಕ ತನ್ನ ಆರ್ಥಿಕ ಸಾಮರ್ಥ್ಯದಲ್ಲಿ ಹಿಂದಿಗಿಂತ ಕೆಳಗಿಳಿದಿದ್ದರೂ ಇಂದೂ ಜಾಗತಿಕ ಮಟ್ಟದಲ್ಲಿ ಅದು ಪ್ರಬಲವಾಗಿಯೇ ಮುಂದುವರಿದಿದೆ.

ಇಂಡಸ್ಟ್ರಿವೀಕ್ ಎಂಬ ಪತ್ರಿಕೆ ಜಗತ್ತಿನ 1000 ದೊಡ್ಡ ಉತ್ಪಾದಕ ಕಂಪನಿಗಳ ಪಟ್ಟಿಯೊಂದನ್ನು ತಯಾರಿಸಿದೆ. ಈ ಪಟ್ಟಿಯ ಮೊದಲ ಸ್ಥಾನಗಳಲ್ಲಿ ಅಮೆರಿಕದ ಕಂಪನಿಗಳಿಗೇ ಹೆಚ್ಚಿನ ಸ್ಥಾನಗಳು.

ಅಮೆರಿಕದ ಜನರಲ್ ಮೋಟಾರ್ ಈ ಪಟ್ಟಿಯಲ್ಲಿ ಮೊದಲಸ್ಥಾನ ಪಡೆದಿದೆ. ನಂತರದ ಸ್ಥಾನ ಜನರಲ್ ಮೋಟಾರ್ ಕಂಪನಿಯದು ನಂತರದ ಸ್ಥಾನ ಎಕ್ಸಾನ್ ಎಂಬ ಅಮೆರಿಕನ್ ಕಂಪನಿಯದು.

ನಾಲ್ಕನೇ ಸ್ಥಾನ ನೆದರ್‌ಲ್ಯಾಂಡ್‌ನ ರಾಯಲ್ ಡಚ್/ಶೀಲ್‌ಗೆ ಹೋದರೆ ಐದನೇ ಸ್ಥಾನ ಜಪಾನಿನ ಟೊಯೊಟಾ ಮೋಟಾರ್ ಕಂಪನಿಯದು.

ಅಮೆರಿಕದ ಉತ್ಪಾದಕರು ಒಟ್ಟು 3 ಬಿಲಿಯನ್ ಡಾಲರುಗಳಷ್ಟು (ಒಂದುಲಕ್ಷ ಕೋಟಿ ಡಾಲರುಗಳು) ಆದಾಯವನ್ನು ಸೃಷ್ಟಿಸಿದ್ದಾರೆ.

ಹೀಗೆ ಜಾಗತಿಕ ಆರ್ಥಿಕದಲ್ಲಿ ಅಮೇರಿಕದ ಸ್ಥಾನ ಮುಂದುವರೆದಿದೆ.

ಲಾಭದ ಹಣವನ್ನು ತಮ್ಮ ದೇಶಗಳಿಗೆ ಕೊಂಡೊಯ್ಯಲು ವಿದೇಶಿ ಬ್ಯಾಂಕುಗಳಿಗೆ ಅನುಮತಿ

ವಿದೇಶೀ ಬ್ಯಾಂಕುಗಳು ತಮ್ಮ ಲಾಭದ ಹಣವನ್ನು ತಮ್ಮದೇಶಕ್ಕೆ ಕೊಂಡೊಯ್ಯಲು ನಿರ್ಬಂಧವಿತ್ತು. ಇಂತಹ ನಿರ್ಬಂಧವಿಲ್ಲದಿದ್ದರೆ ವಿದೇಶೀಬ್ಯಾಂಕುಗಳು ಅಪಾರ ಲಾಭಗಳಿಸಿ ಹಣವನ್ನು ತಮ್ಮ ದೇಶಕ್ಕೆ ಕೊಂಡೊಯ್ಯುತ್ತಾರೆ. ಭಾರತ ದೇಶಕ್ಕೆ ಹೆಚ್ಚಿನ ಹೂಡಿಕೆ ಮಾಡುವುದಿಲ್ಲ ಜೊತೆಗೆ ಬ್ಯಾಂಕುಗಳು ತಮ್ಮ ಕಾನೂನು ಬಾಹಿರ ಕಾರ್ಯಾಚರಣೆಗಳಿಗೆ ಪ್ರಸಿದ್ಧಿ ಹೊಂದಿದವರು. ಹೀಗಿರುವಾಗ ಅವರು ಲಾಭ ಹಿಂದಕ್ಕೊಯ್ಯುವುದರ ಮೇಲೆ ನಿರ್ಬಂಧವಿರುವುದು ಅವಶ್ಯಕವಾಗಿತ್ತು.

ಈಗ ಭಾರತೀಯ ರಿಸರ್ವ್‌ಬ್ಯಾಂಕ್ ವಿದೇಶಿ ಬ್ಯಾಂಕುಗಳಿಗೆ ಲಾಭ ಹಿಂದಕ್ಕೊಯ್ಯಲು ಅನುಮತಿ ನೀಡಿದೆ. ಬೇರೆ ಕಂಪನಿಗಳಿಗೆ ಈಗಾಗಲೇ ಅಂತಹ ಅನುಮತಿ ನೀಡಿರುವುದರಿಂದ ಬ್ಯಾಂಕಿಂಗ್ ಕಂಪನಿಗಳಿಗೆ ಈಗ ಅನುಮತಿ ನೀಡಲಾಗಿದೆ ಎಂದು ಆರ್.ಬಿ.ಐ. ಹೇಳಿದೆ. ಇದು ಬ್ಯಾಂಕಿಂಗ್ ಕಾಯಿದೆಯ ಪ್ರಕಾರವೇ ಇರಬೇಕು ಎಂದೂ ಅದು ಹೇಳಿದೆ. ಆದರೆ ದೇಶ ದೇಶಗಳನ್ನೇ ಕೊಳ್ಳೆ ಹೊಡೆಯುವ ಪ್ರವೃತ್ತಿಯ ಬಹುರಾಷ್ಟ್ರೀಯ ಕಂಪನಿಗಳು ಇದರ ಪೂರ್ಣ ಲಾಭ ಪಡೆಯದೇ ಇರುತ್ತಾರೆಯೇ?

ವಿಮಾ ರಂಗದ ಉದ್ಯೋಗಿಗಳ ಪ್ರತಿಭಟನೆ

ವಿಮಾ ರಂಗದ ಉದಾರೀಕರಣವನ್ನು ತಾನು ವಿರೋಧಿಸುವುದಾಗಿ ಹೇಳುತ್ತ ಹಿಂದೆ ಸಂಯುಕ್ತ ರಂಗದ ಪಿ.ಚಿದಂಬರಂ ಅವರು ವಿಮಾ ರಂಗದ ಉದಾರೀಕರಣದ ಮಸೂದೆಯನ್ನು ಮಂಡಿಸಿದಾಗ ಬಿಜೆಪಿ ಈ ಮಸೂದೆಯನ್ನು ವಿರೋಧಿಸಿತ್ತು. ಅಧಿಕಾರದಲ್ಲಿರದಾಗ ಒಂದು ಧೋರಣೆ ಮತ್ತು ಅಧಿಕಾರಕ್ಕೆ ಬಂದ ಮೇಲೆ ಇನ್ನೊಂದು ಧೋರಣೆ ತಾಳುವಲ್ಲಿ ನಿಸ್ಸೀಮವಾಗಿರುವ ಬಿಜೆಪಿ ಈಗ ಅಧಿಕಾರಕ್ಕೆ ಬಂದ ಮೇಲೆ ವಿಮಾರಂಗದ ಉದಾರೀಕರಣಕ್ಕಿಳಿದಿದೆ.

ಒಂದೇ ಬಾರಿಗೆ ವಿಮಾರಂಗವನ್ನು ಪೂರ್ತಿ ತೆರವ ಬದಲು ದೇಶೀ ಕಂಪನಿಗಳಿಗೆ ಮಾತ್ರ ಭಾರತದ ವಿಮಾ ರಂಗವನ್ನು ತೆರೆವ ಮಾತನ್ನು ಅದು ಬಜೆಟ್ಟಿನಲ್ಲಿ ಪ್ರಸ್ತಾಪಿಸಿದೆ. ಈ ಕ್ರಮಕ್ಕೆ ತಕ್ಕ ವಿರೋಧವನ್ನು ಅದು ಎದುರಿಸಲೇಬೇಕಾಗಿದೆ. ವಿಮಾರಂಗದ ಉದ್ಯೋಗಿಗಳು ಕೇಂದ್ರ ಸರ್ಕಾರದ ಈ ಕ್ರಮವನ್ನು ಬಲವಾಗಿ ಪ್ರತಿಭಟಿಸುವ ತಯಾರಿ ನಡೆಸಿದ್ದಾರೆ.

ವಿಮಾ ರಂಗದ ಎರಡು ಲಕ್ಷ ಉದ್ಯೋಗಿಗಳು ಈ ಉದಾರೀಕರಣದ ವಿರುದ್ಧ ಜನಾಭಿಪ್ರಾಯ ಮೂಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಈ ಖಾಸಗೀಕರಣದ ಕ್ರಮದಿಂದಾಗಿ ಭಾರತದ ದೊಡ್ಡ ಬಂಡವಾಳಿಗರು ಇದೇ ವಿಮಾ ರಂಗದ ಮೇಲೆ ತಮ್ಮ ಹಿಡಿತ ಸಾಧಿಸುವುದು ಸಾಧ್ಯವಾಗುತ್ತದೆ. ಆಗ ಜನಸಾಮಾನ್ಯರಿಗೆ ವಿಮಾ ಸೌಲಭ್ಯಗಳು ಕಡಿಮೆ ದರದಲ್ಲಿ ದೊರೆವ ಬದಲು ಶ್ರೀಮಂತರಿಗೆ ಮಾತ್ರ ಇದು ಲಭ್ಯವಾಗುತ್ತದೆ. ಜೊತೆಗೆ ವಿಮೆ ವ್ಯವಹಾರದಿಂದ ಅವರಿಗೆ ಲಾಭವೂ ಹೆಚ್ಚಾಗುತ್ತದೆ ಎಂದು ಉದ್ಯೋಗಿಗಳು ಹೇಳಿದ್ದಾರೆ.

ಈ ಕಾರಣಕ್ಕಾಗಿಯೇ ಇಂತಹ ಖಾಸಗೀ ಕರಣದ ಕ್ರಮವನ್ನು ಒಗ್ಗಟ್ಟಿನಿಂದ ಎದುರಿಸಿ ಹೋರಾಡುವ ನಿಲುವನ್ನು ವಿಮಾ ರಂಗದ ವಿವಿಧ ಸಂಘಗಳು ತೀರ್ಮಾನ ಕೈಗೊಂಡಿವೆ.

ವಿಮೆಯ ಖಾಸಗೀಕರಣದ ಪ್ರಯತ್ನಗಳನ್ನು ವಿಮಾ ನೌಕರರು ಬಲವಾಗಿ ವಿರೋಧಿಸುವರು ಎಂದು ಅಖಿಲ ಭಾರತ ವಿಮಾ ನೌಕರರ ಸಂಘ ಹೇಳಿದೆ. ಮತಪ್ರದರ್ಶನಗಳು, ಧರಣಿಗಳು, ಮುಷ್ಕರಗಳು ಹಾಗೂ ಇತರ ಹೋರಾಟದ ಸಾಧನಗಳ ಮೂಲಕ ತಮ್ಮ ವಿರೋಧವನ್ನು ವ್ಯಕ್ತಪಡಿಸುವುದಾಗಿ ಅದು ಹೇಳಿದೆ. ವಿಮೆಯನ್ನು ದೇಶೀ ಕಂಪನಿಗಳಿಗೆ ತೆರೆಯುವ ಬಜೆಟ್ ಆಶಯವನ್ನು ಜಾರಿಗೆ ತರಲು ಶಾಸನ ಕ್ರಮಗಳನ್ನು ಕೈಗೊಂಡರೆ ಮುಷ್ಕರ ಕಾರ್ಯಾಚರಣೆಯನ್ನು ಪರಿಶೀಲಿಸಲಾಗುವುದು ಎಂದು ಸಂಘ ಹೇಳಿದೆ.

ಪ್ರತಿಯೊಂದು ಭಾರತೀಯ ಕಂಪನಿಯೂ ವಿದೇಶಿ ಕಂಪನಿಯೊಂದರೊಂದಿಗೆ ಜಂಟಿ ಉದ್ದಿಮೆ ಬಗ್ಗೆ ಯೋಚಿಸುತ್ತಿರುವಾಗ ಕೇವಲ ಭಾರತೀಯ ಕಂಪನಿಗಳಿಗೇ ಪ್ರವೇಶ ನೀಡಲಾಗುವುದು ಎಂದು ಹೇಳಿ ಯಾರನ್ನೂ ವಂಚಿಸಲು ಸಾಧ್ಯವಿಲ್ಲ ಎಂದಿರುವ ಈ ನೌಕರರ ಸಂಘ ಅಮೆರಿಕಾ ಮತ್ತಿತರ ದೇಶಗಳು ದಿಗ್ಬಂಧನ ಹಾಕುತ್ತಿರುವ ಹಿನ್ನೆಲೆಯಲ್ಲಿ ವಿದೇಶಿ ಕಂಪನಿಗಳಿಗೆ ಪ್ರವೇಶ ನೀಡುವ ಪರೋಕ್ಷ ಆಮಿಷವೊಡ್ಡಲಾಗುತ್ತಿದೆ ಎಂಬುದು ಸ್ಪಷ್ಟ ಎಂದು ಅಭಿಪ್ರಾಯ ಪಟ್ಟಿದೆ.

ಕೇವಲ ಸ್ಪರ್ಧಾಳುಗಳನ್ನು ಹೆಚ್ಚಿಸುವುದರಿಂದ ಉತ್ತಮ ವಿಮಾ ಸೌಲಭ್ಯವಾಗಲೀ, ಮೂಲ ಸೌಕರ್ಯಗಳಿಗೆ ಹೆಚ್ಚಿನ ಸಂಪನ್ಮೂಲಗಳಾಗಲಿ ಸಿಗಲಾರದು. ವಿಮಾರಂಗ ಪ್ರವೇಶಿಸಬಯಸುವ ದೇಶಿ-ವಿದೇಶಿ ಕಂಪನಿಗಳು ಮೂಲ ಸೌಕರ್ಯ ವಲಯದಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ತೊಡಗಿಸುತ್ತವೆ ಎಂಬುದಕ್ಕೆ ಆಧಾರಗಳೇನೂ ಇಲ್ಲ. ವಾಸ್ತವವಾಗಿ ಅವು ಎನ್ರೋನ್, ಕೊಜೆಂಟ್ರಿಕ್ಸ್‌ಗಳಂತೆ ಹಿಂಡಲು ಅವಕಾಶವಿದ್ದರೆ ಮಾತ್ರ ಹಣ ತೊಡಗಿಸುತ್ತವೆ ಎಂದು ನೌಕರರ ಸಂಘ ಎಚ್ಚರಿಸಿದೆ.

ತದ್ವಿರುದ್ಧವಾಗಿ ಎಲ್.ಐ.ಸಿ. 1997-98 ರ ಒಂದೇ ವರ್ಷದಲ್ಲಿ 20,000 ಕೋಟಿ ರೂ. ತೊಡಗಿಸಿದೆ. ಅದೇ ರೀತಿ ಜಿ.ಐ.ಸಿ. 2500 ಕೋಟಿ ರೂ. ನೀಡಿದೆ. ಎಲ್.ಐ.ಸಿ. ಯ ಹಣ ನಿವೇಶನಗಳಲ್ಲಿ 30% ವನ್ನು ಆದ್ಯತೆ ವಲಯದಲ್ಲಿ ತೊಡಗಿಸಲಾಗಿದೆ. ಇದರಲ್ಲಿ ಮೂಲ ಸೌಕರ್ಯಗಳ ವಲಯವೂ ಇದೆ. ಅಂದರೆ ಹೆಚ್ಚಿನ ಇಕ್ವಿಟಿಗಳನ್ನು ತೊಡಗಿಸದೆಯೇ ವಿಮಾ ರಂಗದ ಈ ಎರಡು ಬೃಹತ್ ಸಾರ್ವಜನಿಕ ಸಂಸ್ಥೆಗಳು ವಾರ್ಷಿಕವಾಗಿ 6000 ಕೋಟಿ ರೂ. ಮೂಲಸೌಕರ್ಯಗಳಲ್ಲಿ ತೊಡಗಿಸಿವೆ ಎಂದು ಹೇಳಿರುವ ಅಖಿಲ ಭಾರತ ವಿಮಾ ನೌಕರರ ಸಂಘ ಒಂಭತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲ್.ಐ.ಸಿ.ಯೊಂದೇ 1 ಲಕ್ಷ ಕೋಟಿ ರೂ.ಗಳನ್ನು, ಜಿ.ಐ.ಸಿ. 15000 ಕೋಟಿ ರೂ.ಗಳನ್ನು ಒದಗಿಸಲಿದೆ ಎಂದಿದೆ. ಇಂತಹ ಸಂಸ್ಥೆಗಳನ್ನು ಅಸ್ಥಿರಗೊಳಿಸುವ ಬದಲು ಅವನ್ನು ಪ್ರಜಾಪ್ರಭುತ್ವೀಕರಿಸಬೇಕು, ಅವಕ್ಕೆ ಸ್ವಾಯತ್ತತೆ ನೀಡಬೇಕು ಎಂದು ಒತ್ತಾಯಿಸಿದೆ.

ದೂರಸಂಪರ್ಕ ಇಲಾಖೆಯನ್ನು ಕಂಪನಿಯಾಗಿಸಬೇಡಿ

ಕಾರ್ಮಿಕ ಸಂಘಗಳ ಕರೆ

ದೂರಸಂಪರ್ಕ ಆಯೋಗದ ಅಧ್ಯಕ್ಷರು ಕರೆದ ಒಂದು ಸಭೆಯಲ್ಲಿ ದೂರಸಂಪರ್ಕ ವಲಯದ ಎಲ್ಲಾ ಕಾರ್ಮಿಕ ಸಂಘಗಳು ದೂರಸಂಪರ್ಕ ಇಲಾಖೆಯನ್ನು ಒಂದು ಕಂಪನಿಯನ್ನಾಗಿ ಮಾಡುವ ಪ್ರಸ್ತಾಪವನ್ನು ದೃಢವಾಗಿ ವಿರೋಧಿಸಿದ್ದಾರೆ. ತಮ್ಮ ಈ ನಿಲುವನ್ನು ಸಮರ್ಥಿಸಿ ಬಲವಾದ ಕಾರಣಗಳನ್ನು ನೀಡಿದ್ದಾರೆ. ದೂರಸಂಪರ್ಕ ಆಯೋಗದ ಅಧ್ಯಕ್ಷರು ಮೂಲಭೂತ ದೂರಸಂಪರ್ಕ ಸೇವೆಗಳಲ್ಲಿ ಖಾಸಗಿಯವರ ಪ್ರವೇಶದಿಂದ ಇದು ಅಗತ್ಯ, ವಿಶ್ವಾದ್ಯಂತ ಸರ್ಕಾರೀ ಗುತ್ತೇದಾರಿಗಳನ್ನು ಕೈಬಿಡಲಾಗುತ್ತಿದೆ ಎಂದಾಗ ಎಲ್ಲಾ ಸಂಘಗಳ ಪ್ರತಿನಿಧಿಗಳು ಈ ಖಾಸಗಿಕರಣ-ಪರ ನಿಲುವನ್ನು ಬಲವಾಗಿ ವಿರೋಧಿಸಿದರು.

ಅವರು ಕೊಟ್ಟ ನಾಲ್ಕು ಕಾರಣಗಳು ಹೀಗಿವೆ :

1. ಕಂಪನಿ ತರದ ವ್ಯವಸ್ಥೆಗೆ ಬದಲಿಸಲು ಸುಮಾರು 20,000 ಕೋಟಿ ರೂ. ಖರ್ಚಾಗುತ್ತದೆ, ನಂತರ ಪ್ರತಿವರ್ಷ 10,000 ರೂ. ಕೋಟಿ ಗಳಷ್ಟು ಕಂಪನಿ ತೆರಿಗೆಯು ಹೊರೆ ಬರುತ್ತದೆ. ಇಷ್ಟೆಲ್ಲಾ ಹೊರೆ ಹೊತ್ತು ಈಗಿನ ಶೇ. 22 ಬೆಳವಣಿಗೆ ದರ ಸಾಧ್ಯವಾಗದು.

2. ವಿಶ್ವಾದ್ಯಂತ ಬಹಳ ಮುಂದುವರೆದ ದೂರಸಂಪರ್ಕ ಸಾರ್ವತ್ರಿಕವಾಗಿರುವ, ಪ್ರತಿ ನೂರು ಮಂದಿಗೆ 20-40 ಟೆಲಿಫೋನುಗಳಿರುವ ದೇಶಗಳಲ್ಲಿ ಮಾತ್ರವೇ ದೂರಸಂಪರ್ಕ ಜಾಲವನ್ನು ಕಂಪನಿಯಾಗಿ ಅಥವಾ ಖಾಸಗಿಯವರಿಗೆ ಕೊಡಲಾಗಿದೆ. ನಮ್ಮಲ್ಲಿ ಇನ್ನೂ 100 ಜನರಿಗೆ 1.6 ಟೆಲಿಫೋನ್ ಇರುವಾಗ ಈಗಿನ ದರದಲ್ಲಿ ಈ ಸೇವೆ ಸಾರ್ವತ್ರಿಕವಾಗಲು ಇನ್ನೂ ಒಂದು ದಶಕ ಬೇಕು. ಈ ಹಂತದಲ್ಲಿ ದೂರಸಂಪರ್ಕ ಜಾಲವನ್ನು ಒಂದು ಕಂಪನಿಯಾಗಿ ಮಾಡಿದರೆ ಈಗಿನ ತೀವ್ರ ಏರಿಕೆಯ ದರ ಸಾಧ್ಯವಾಗದು.

3. ಈಗ ಗ್ರಾಮೀಣ, ದೂರದ ಪ್ರದೇಶಗಳಲ್ಲಿ ದೂರಸಂಪರ್ಕ ಬೆಳೆಯುವುದು ಸಾಧ್ಯವಾಗಿರುವುದು ಹೆಚ್ಚು ಲಾಭ ಗಳಿಸುವ ಪ್ರದೇಶಗಳಿಂದ ಬಂದ ಹಣವನ್ನು ಇಲ್ಲಿ ಬಳಸುವ ಆಂತರಿಕ ಸಬ್ಸಿಡಿಯ ಮೂಲಕವೇ. ಈ ಮೂಲಕ ದೂರಸಂಪರ್ಕ ಇಲಾಖೆ ಒಂದು ಮೂಲಭೂತ ಸಾಮಾಜಿಕ ಕರ್ತವ್ಯವನ್ನು ನಿಭಾಯಿಸುತ್ತಿದೆ. ಈ ಸಂಪರ್ಕದ ಮೂಲಕ ಆರೋಗ್ಯ, ಪ್ರಾಥಮಿಕ ಶಿಕ್ಷಣ, ಕುಡಿಯುವ ನೀರು ಇತ್ಯಾದಿಗಳು ಮೂಲೆ ಮೂಲೆಗಳಿಗೆ ತಲುಪುವಂತೆ ಮಾಡುತ್ತದೆ. ಇದನ್ನು ಕಂಪನಿಯಾಗಿ ಮಾಡಿದರೆ ಇದು ಸಾಧ್ಯವಿಲ್ಲ.

4. ಮೂಲ ದೂರಸಂಪರ್ಕ ಸೇವೆಗಳಲ್ಲಿ ಖಾಸಗಿಯವರಿಗೆ ಪವೇಶ ನೀಡಿದ್ದು, ಕೇಳಿದಾಗ ಟೆಲಿಫೋನ್ ಒದಗಿಸುವ ದೂರಸಂಪರ್ಕ ಇಲಾಖೆಯ ಪ್ರಯತ್ನವನ್ನು ಈಡೇರಿಸಲು ನೆರವಾಗಲು. ಆದರೆ ನಾಲ್ಕು ವರ್ಷಗಳಿಂದಲೂ ಯಾವುದೇ ಖಾಸಗಿಯವರು ತಮ್ಮದೇ ಜಾಲ ಹೊಂದಲು ಸಾಧ್ಯವಾಗಿಲ್ಲ, ಒಂದೇ ಒಂದು ಟೆಲಿಫೋನ್ ಲೈನ್ ಒದಗಿಸಲು ಆಗಿಲ್ಲ. ಆದರೆ ಅವರು ದರಗಳನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಆಗ್ರಹಿಸುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ನಮ್ಮ ದೇಶೀ ಗ್ರಾಹಕರಿಗೆ ತಮ್ಮ ಟೆಲಿಫೋನ್‌ಗಳನ್ನು ವಾಪಸ್ಸು ಕೊಡುವುದು ಬಿಟ್ಟು ಬೇರೆ ದಾರಿಯುಳಿಯುವುದಿಲ್ಲ. ಏಕೆಂದರೆ ಶೇ. 60 ರಷ್ಟು ಗ್ರಾಹಕರು ಕೇವಲ ಫ್ರೀ ಕಾಲ್‌ಗಳನ್ನಷ್ಟೇ ಬಳಸುತ್ತಾರೆ.



ಕಾಂ|| ಲೀಲಾವತಿಯ ವಿಶಿಷ್ಟ ನೆನಕೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು 5ನೇ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಅಧಿವೇಶನ ಒಂದು ವರ್ಷದ ಕೆಳಗೆ 23.4.97 ರಂದು ಹಾಡುಹಗಲೇ ತಮ್ಮ ಮನೆಯ ಮುಂದೆಯೇ ಗೂಂಡಾಗಳ 25 ಚಾಕು ತಿವಿತಗಳಿಂದ ಅಸುನೀಗಿ ಹುತಾತ್ಮರಾದ ಮಧುರೈನ ಲೀಲಾವತಿಯವರನ್ನು ವಿಶಿಷ್ಟ ರೀತಿಯಲ್ಲಿ ಸ್ಮರಿಸಿಕೊಂಡಿತು.


ಸಂಘಟನೆಯ ಒಬ್ಬ ಅಖಿಲ ಭಾರತ ಮುಖಂಡರಾದ ಮೈಥಿಲಿ ಶಿವರಾಮನ್ ಈ ಬಗ್ಗೆ ನಿರ್ಣಯ ಮಂಡಿಸುತ್ತಾ ಲೀಲಾವತಿಯ ಬದುಕು ಮತ್ತು ಸಾವು ಮಹಿಳೆಯರು ರಾಜಕೀಯದ ಅಪರಾಧೀಕರಣವನ್ನು ಎದುರಿಸುವಲ್ಲಿ ಕೂಡಾ ಪುರಷರಿಗಿಂತ ಹಿಂದಿಲ್ಲ ಎಂಬುದನ್ನು ತೋರಿಸಿದೆ. ಆಕೆ 33ಅ ಅಲ್ಲ 50ಅ ಮೀಸಲಾತಿಗೆ ಅರ್ಹಳು ಎಂದು ತೋರಿಸಿಕೊಟ್ಟಿದೆ ಎಂದರು. ಅವರು ಒಂದು ಬಲಿಷ್ಠ ಆಂದೋಲನವನ್ನು, ಜತೆಗೆ ಮೂರು ಮಕ್ಕಳನ್ನು ಈ ಆಂದೋಲನಕ್ಕೆ ಬಿಟ್ಟು ಹೋಗಿದ್ದಾರೆ ಎನ್ನುತ್ತಾ ಆಕೆಯ ಹಿರಿಯ ಮಗಳಾದ ಕಲಾವತಿಯನ್ನು ಸಭೆಗೆ ಪರಿಚಯಿಸಿದರು. ಈಗಾಗಲೇ ಮಧುರೈನ ಪ್ರಜಾಪ್ರಭುತ್ವವಾದಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಕಲಾವತಿ, ತಾಯಿ ಹಾಗೂ ಅಸಂಖ್ಯ ಹುತಾತ್ಮರು ಹಾಕಿಕೊಟ್ಟ ದಾರಿಯಲ್ಲಿ ಸಾಗುವುದಾಗಿ ಹೇಳಿ ವೇದಿಕೆಯ ಮೇಲಿದ್ದ ಹಿರಿಯ ಚೇತನಗಳಿಗೆ ನಮಿಸಿದರು.

ಸ್ವಾತಂತ್ರ್ಯ ಹೋರಾಟದ ವೀರವನಿತೆಯರೇ, ನಿಮಗೆ ಲಾಲ್ ಸಲಾಂ

ಬೆಂಗಳೂರಿಗರಿಗೊಂದು ಅದ್ಭುತ ಅವಕಾಶ. ಅಂದು ಟೌನ್ಹಾಲಿನಲ್ಲಿ ಭಾವಪೂರಿತ ಸನ್ನಿವೇಶ. ಹಿರಿಯ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪುಗಳನ್ನು ಎಲ್ಲರ ಮುಂದೆ ಬಿಚ್ಚಿಡುತ್ತಾ ಹೋದಂತೆ. ಈ ವೀರವನಿತೆಯರು ಸ್ವಾತಂತ್ರ್ಯ ಹೋರಾಟಗಾರರಲ್ಲೇ ವಿಶಿಷ್ಟರಾದವರು. ಭಾರತದ ವಿವಿಧ ರಾಜ್ಯಗಳಿಂದ ಬಂದವರು. ಸ್ವಾತಂತ್ರ್ಯ ಹೋರಾಟದ ವಿವಿಧ ತೊರೆಗಳಿಂದ ಆಕರ್ಷಿತರಾದವರು. ವಿವಿಧ ಮಜಲುಗಳಲ್ಲಿ ಭಾಗವಹಿಸಿದವರು. ಆದರೂ ಆಶ್ಚರ್ಯಕಾರಿಯಾಗಿ ಎಲ್ಲರಿಗೂ ಸಾಮಾನ್ಯವಾದ ಹಲವು ಅಂಶಗಳಿದ್ದವು. ಹೆಚ್ಚಿನವರು ಹದಿ ಹರೆಯದಲ್ಲೇ 13-14 ವರ್ಷದಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದವರು. ಆಗಿನ ಪ್ರತಿಕೂಲ ಸಾಮಾಜಿಕ ಸ್ಥಿತಿಗಳಲ್ಲೂ ಸ್ವಾತಂತ್ರ್ಯ ಬಂದ ಮೇಲೆ ಬಂತಲ್ಲಾ ಬಿಡು ಎಂದು ಉಸ್ಸೆಂದು ಕೂತವರಲ್ಲ. ನಿಜವಾದ ಅರ್ಥಪೂರ್ಣ ಸ್ವಾತಂತ್ರ್ಯ ಎಲ್ಲಾ ಭಾರತೀಯರಿಗೆ ಅದರಲ್ಲೂ ಅದರ ಅರ್ಧದಷ್ಟು ಮಹಿಳೆಯರಿಗೆ ಬಂದೇಇಲ್ಲ. ಇದರ ಬಗ್ಗೆ ಚಿಂತನೆ ಮಾಡುತ್ತಾ ಕಮ್ಯುನಿಸ್ಟರಾದವರು ಅದು ಆಗುವವರೆಗೆ ಹೋರಾಟ ಮುಂದುವರೆಸಲು ಕಟಿಬದ್ಧರಾದವರು. ಅದಕ್ಕಾಗಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯನ್ನು ಕಟ್ಟಿದವರು, ಇಂದಿನ ಕೋಮುವಾದಿ ಅಜೆಂಡಾದ ಬಗ್ಗೆ ರೋಷ ಉಳ್ಳವರು. ಸ್ವಾತಂತ್ರ್ಯ ಹೋರಾಟದ ಆಶಯಗಳ ಈಡೇರಿಕೆಗೆ ಕೊನೆಯ ಉಸಿರು ತನಕ ಹೋರಾಟ ಮುಂದುವರೆಸಲು ಟೊಂಕ ಕಟ್ಟಿದವರು. ಇದನ್ನು ನಂತರವೂ ಮುಂದುವರೆಸುವ ಹೊಸ ನಾಯಕತ್ವ ತಯಾರಿಸಿದವರು. ಆ ಬಗ್ಗೆ ಆಶಾಭಾವನೆ ಉಳ್ಳವರು.


ನಾಲ್ಕು ಸಾವಿರ ಸಶಸ್ತ್ರ ಮಹಿಳೆಯರ ಯೂನಿಟ್‌ನ ಕ್ಯಾಪ್ಟನ್ ಲಕ್ಷ್ಮಿ:

20 ವರ್ಷದ ಮೆಡಿಕಲ್ ಓದುತ್ತಿದ್ದ ಲಕ್ಷ್ಮಿಯನ್ನು ಸುಭಾಷ್ ಚಂದ್ರ ಬೋಸರ "ತುಮ ಹಮ್‌ಕೊ ಖೂನ್ ದೋ, ಮೈ ತುಂಮಕೋ ಆಝಾದಿ ದೂಂಗಾ" ಎಂಬ



ಆಹ್ವಾನ ಬೀಸಿ ಕರೆಯಿತು. ಸುಭಾಶ್ ಚಂದ್ರ ಬೋಸರ ಇಂಡಿಯನ್ ನೇಶನಲ್ ಆರ್ಮಿ (ಐ.ಎನ್.ಎ) ಸೇರಿ ಸಶಸ್ತ್ರ ಹೋರಾಟದ ತರಬೇತಿ ಪಡೆದರು. ದೇಶದ ಹೊರಗೆ ಹೋಗಿ ಐ.ಎನ್.ಎಯ ಮಹಿಳಾ ಯೂನಿಟ್ ಕಟ್ಟಿದರು. ಬ್ರಿಟಿಷರು ಭಾರತಕ್ಕೆ ಕಾಲಿಟ್ಟ ನಂತರದ ಪೂರ್ಣ ಮಹಿಳಾ ಸಶಸ್ತ್ರ ಪಡೆ ಲಕ್ಷ್ಮಿಯವರದು. ಲಕ್ಷ್ಮಿ ಸ್ವಾಮಿನಾಥನ್ ಕ್ಯಾಪ್ಟನ್ ಲಕ್ಷ್ಮಿ ಆದರು. ಆ ಮೇಲೆ ಮಾರ್ಕ್ಸ್‌ವಾದದತ್ತ ಆಕರ್ಷಿತರಾದ ಲಕ್ಷ್ಮಿ ಸೆಹಗಲ್ ಕಮ್ಯೂನಿಸ್ಟ್ ಪಕ್ಷ ಸೇರಿದರು

13 ವರ್ಷಕ್ಕೆ ಜೈಲಿಗೆ ಹೋದೆ



ಅಹಲ್ಯಾಗೆ ವಿದೇಶಿ ವಸ್ತುಗಳ ಬಹಿಷ್ಕಾರ, ಅವನ್ನು ಮಾರುವ ಅಂಗಡಿಗಳ ಪಿಕೆಟಿಂಗ್‌ನಲ್ಲಿ ಭಾಗವಹಿಸಿ ದಸ್ತಗಿರಿ ಆದಾಗ ಕೇವಲ 13 ವರ್ಷ. ಮಾಜಿಸ್ಟ್ರೇಟ್, ನಿನಗೆ ಏನು ರಾಜಕೀಯ ತಿಳೀತದೆ, ಏನೂ ತಿಳಿಯದೆ ಮಾಡಿದೆ. ಮಾಫಿ ಕೇಳು ಎಂದಾಗ, ನಾನು ಏನು ಮಾಡುತ್ತಿದ್ದೇನೆ, ಯಾಕೆ ಮಾಡುತ್ತಿದ್ದೇನೆ ಎಂದು ನನಗೆ ರಾಜಕೀಯ ಜ್ಞಾನ ಇದೆ ಎಂದು ಸವಾಲು ಹಾಕಿದ ಅಹಲ್ಯಾಳನ್ನು ಜೈಲಿಗೆ ಹಾಕದೆ ಮ್ಯಾಜಿಸ್ಟ್ರೇಟ್‌ಗೆ ವಿಧಿ ಇರಲಿಲ್ಲ. ಅದು ಬರಿಯ ಆರಂಭ. ಆಮೇಲೆ ಸ್ವಾತಂತ್ರ್ಯ ಹೋರಾಟ ತೀವ್ರವಾಗುತ್ತಾ ಹೋದಂತೆ ಹಲವಾರು ಬಾರಿ ಜೈಲಿಗೆ ಹೋದರು ಅಹಲ್ಯಾ. ಯೆರವಾಡಾ ಜೈಲಿನಲ್ಲಿ ಖಾನ್ ಅಬ್ದುಲ್ ಗಫಾರ್ ಇವರ ಪುತ್ರಿ ಸೋಫಿಯಾ ಖಾನ್ ಜತೆ ಅಹಲ್ಯಾ ಆಗಿನ ದೇಶದ ಐಕ್ಯತೆ ಬಗ್ಗೆ ಹಾಡುತ್ತಿದ್ದ ಹಾಡು. ಈಗ ಮಂದಿರ-ಮಸೀದಿ ಜಗಳ ತೆಗೆಯಬೇಡಿ ಎಂದು ಕೇಳುವ ಹಾಡು ಹಾಡಬೇಕಾಗಿರುವ ಪರಿಸ್ಥಿತಿ ಬಗ್ಗೆ ದುಃಖಿಸಿದರು. 1946ರ ಆರ್.ಐ.ಎನ್ ದಂಗೆಯಲ್ಲಿ ನಾವಿಕರಿಗೆ, ಅಧಿಕಾರಿಗಳು ಆಹಾರ ನಿಲ್ಲಿಸಿದಾಗ ಕಾರ್ಮಿಕರ ಸಂಘಟನೆಯ ಮಹಿಳೆಯರು ಉಪಾಯವಾಗಿ ಎಲ್ಲಾ ಭದ್ರತಾ ಕ್ರಮಗಳನ್ನು ಮುರಿದು ಆಹಾರ ತಲುಪಿಸಿದ ಸಂಚಿನ ಬಗ್ಗೆ ನೆನೆದರು. ರಿನ್ ದಂಗೆಗೆ ಕಾರ್ಮಿಕರು ಸೌಹಾರ್ದ ಮುಷ್ಕರ ಮೆರವಣಿಗೆ ಮಾಡಿದಾಗ ಮುಂಬಯಿಯ ರಸ್ತೆಯಲ್ಲಿ ಪೋಲೀಸರ ಗೋಲಿಬಾರಿನಿಂದ ರಕ್ತ ಹರಿಯಿತು. ತಮ್ಮ ಗೆಳತಿ ಕಮಲ್ ಧೋಂಡೆಯನ್ನು ಕಣ್ಣೆದುರಲ್ಲೆ ಗೋಲೀಬಾರಿಗೆ ಬಲಿಯಾಗುವುದನ್ನು, ತಂಗಿ ಕುಸಮ್ ರಣದಿವೆ ಸ್ವಲ್ಪದರಲ್ಲೇ ಪಾರಾದನ್ನು ಕಂಡವರು ಅಹಲ್ಯಾ. ನಂತರ ಕಾರ್ಮಿಕ ಸಂಘಟನೆಗಳಲ್ಲಿ ದುಡಿಯುತ್ತಾ ಕಮ್ಯುನಿಷ್ಟರಾದರು. ಮಹಿಳಾ ಚಳುವಳಿಯ ಚುಕ್ಕಾಣಿ ಹಿಡಿದರು.

"ಕೊನೆ ಬಾರಿ ತಾಯಿ ಮುಖ ನೋಡಲೇ, ನನ್ನ ಧ್ಯೇಯಕ್ಕೆ ಬದ್ಧಳಾಗಿರಲೇ?"

ತಮಿಳುನಾಡಿನ ಪಾಪಾರ ವಿಶಿಷ್ಟತೆ ಎಂದರೆ ಆಕೆ ಕಾರ್ಮಿಕ ವರ್ಗದಿಂದ ಬಂದವರು. ರೈಲ್ವೇ ಕಾಲೋನಿಯೊಂದರಲ್ಲಿ ವಾಸಿಸುತ್ತಿದ್ದ ಪಾಪಾ ತಂದೆ ತಾಯಿ ಇಬ್ಬರೂ ದೇಶಭಕ್ತ ಸಾಮಾಜಿಕ ಕಾರ್ಯಕರ್ತರು. ಹದಿಹರೆಯದಲ್ಲೇ ತಮ್ಮದೇ ಆದ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು. ತಮ್ಮ ನೆರೆ ಹೊರೆಯಲ್ಲಿ ವಿಶಿಷ್ಟ ರಾಜಕೀಯ ಸಂದೇಶದ ರಂಗೋಲಿ ಬಿಡಿಸುತ್ತಾ ಗೆಳತಿಯರನ್ನು ಕಲೆ ಹಾಕಿ ಸ್ವಾತಂತ್ರ್ಯ ಹೋರಾಟದ ಸಂದೇಶ ಬೀರುತ್ತಾ ಪೋಲೀಸರು ಬಂದಾಗ ಕಾಲೋನಿಯ ಓಣಿ -ಗಲ್ಲಿಗಳಲ್ಲಿ ಅಡಗಿಕೊಳ್ಳುತ್ತಿದ್ದ ಪಾಪಾ, ಒಂದು ಕಡೆ ರಂಗೋಲಿಯನ್ನು ಪೋಲೀಸರು ಅಳಿಸಿ ಹಾಕಿದರೆ, ಇನ್ನೊಂದು ಕಡೆ ಬರೆಯಲು ಆರಂಭಿಸಿ ಪೋಲಿಸರಿಗೆ ತಲೆನೋವಾಗಿದ್ದಳು. ಒಂದು ದಿನ ಪೋಲಿಸರ ಕೈಗೆ ಸಿಕ್ಕಿಬಿದ್ದ ಪಾಪಾಗೆ ಆಗ 12ವರ್ಷ. ಮ್ಯಾಜಿಸ್ಟ್ರೇಟ್ ಇದೇನು ಇಷ್ಟು ಚಿಕ್ಕ ಹುಡುಗಿಯನ್ನು ಜೈಲಿಗೆ ಹಾಕುವುದು ಎಂದು ಆತ ಬಿಟ್ಟು ಬಿಟ್ಟ. ಪಾಪಾ ಇದು ಅನ್ಯಾಯ ಎಂದು ಗೋಳಿಟ್ಟಳು. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲಿಗೆ ಹೋಗಲು ಅವಕಾಶ ಕೊಡಲಿಲ್ಲ ಅಂತ.

ಆದರೆ ಸ್ವತಂತ್ರ ಭಾರತದ ಕಾಂಗ್ರೆಸ್ ಸರ್ಕಾರ ಆಕೆಗೆ ಆ ಅವಕಾಶ ಬೇಗನೇ ಕೊಟ್ಟಿತು. ಸ್ವತಂತ್ರ ಭಾರತದಲ್ಲಿ ಕಾರ್ಮಿರ ಮುಷ್ಕರದಲ್ಲಿ ಆಕೆಯ ತಾಯಿ ಉಪವಾಸ ಮುಷ್ಕರ ಮಾಡಿ ನಿಧನ ಹೊದಿದರು. ಆಕೆಯನ್ನು ಕೊನೆ ಬಾರಿ ನೋಡಲು ಅವಕಾಶ ಕೇಳಿದರೆ, ಜೈಲಿನ ಅಧಿಕಾರಿಗಳು ನೀವು ಪಾರ್ಟಿ ಬಿಟ್ಟು, ಮಾಫಿ ಕೇಳಿದರೆ ಬಿಡುತ್ತೇವೆ ಎಂದರು. ಕೊನೆಯ ಬಾರಿ ತಾಯಿ ಮುಖ ನೋಡಲೇ? ನನ್ನ ಧ್ಯೇಯಕ್ಕೆ ಬದ್ಧಳಾಗಿರಲೇ? ಎಂಬ ಉಭಯ ಸಂಕಟಕ್ಕೆ ಸಿಲುಕಿದ ಪಾಪಾ ಅಧಿಕಾರಿಗಳ ಸಲಹೆ ತಿರಸ್ಕರಿಸಿದರು. ಆ ಬಗ್ಗೆ ಹೇಳುವಾಗ ಭಾವಪೂರಿತರಾದರು ಪಾಪಾ. ಕಾರ್ಮಿಕ ವರ್ಗದಿಂದ ಬಂದ ಪಾಪಾಗೆ ಸ್ವಾತಂತ್ರ್ಯ ಮಹಿಳೆಯರಿಗೆ, ಕಾರ್ಮಿಕರಿಗೆ ಬಂದಿಲ್ಲ ಎಂದು ತಿಳಿಯುವುದು ತಡವಾಗಲಿಲ್ಲ ತಮಿಳುನಾಡಿನಲ್ಲಿ ಮಹಿಳಾ ಚಳುವಳಿಯ ಬೆನ್ನೆಲುಬಾದರು ಪಾಪಾ.


ತಲೆ ಮೇಲೆ ಹತ್ತು ಸಾವಿರ ರೂಪಾಯಿ ಬಹುಮಾನ



ಆಂಧ್ರ ಪ್ರದೇಶದ ಮಲ್ಲು ಸ್ವರಾಜ್ಯಂ ನಿಜಾಮನ ಹೈದಾರಾಬಾದಿನಲ್ಲಿ ಆಂಧ್ರ ಸಭಾದ ಸಾಂಸ್ಕೃತಿಕ ಚಳುವಳಿಯಿಂದ ಆಕರ್ಷಿತರಾಗಿ ಸೇರಿದವರು. ಈ ಚಳುವಳಿ ತೆಲಂಗಾಣಾ ರೈತರ ದುಡಿಯುವ ಜನರ ಸಶಸ್ತ್ರ ವಿಮೋಚನಾ ಹೋರಾಟವಾಗಿ ಬೆಳೆದಾಗ ನಾಲ್ಕು ನೂರು ಮಹಿಳಾ ಸಶಸ್ತ್ರ ಹೋರಾಟಗಾರರ ಗೆರಿಲ್ಲಾ ನಾಯಕಿಯಾಗಿ ಬಂದೂಕು ಹಿಡಿದವರು ರಾಜಕ್ಕ. ಗೆರಿಲ್ಲಾ ನಾಯಕಿ ರಾಜಕ್ಕ ನಿಜಾಮನ ಸರ್ಕಾರದಲ್ಲಿ ಎಷ್ಟು ಭಯ ಹುಟ್ಟಿಸಿದಳೆಂದರೆ ಆಕೆಯ ಬಗ್ಗೆ ಸುಳಿವು ಅಥವಾ ಹಿಡಿದು ಕೊಟ್ಟವರಿಗೆ ಹತ್ತು ಸಾವಿರ ರೂಪಾಯಿ ಬಹುಮಾನ ಘೋಷಿಸಿತ್ತು ಸರ್ಕಾರ. ಆದರೆ ನಿಜಾಮನ ಸರ್ಕಾರವಾಗಲಿ ಆಮೇಲೆ ಭಾರತದ ಸೈನ್ಯವಾಗಲೀ ಹಿಡಿಯಲಾಗದಂತೆ ಗೆರಿಲ್ಲಾ ನಾಯಕಿ ರಾಜಕ್ಕ ಏಳು ವರ್ಷ ಭೂಗತಳಾಗಿದ್ದಳು. ಸಶಸ್ತ್ರ ಹೋರಾಟವನ್ನು ವಾಪಸು ತೆಗೆದುಕೊಂಡ ಮೇಲೆ ಕಮ್ಯುನಿಷ್ಟಳಾಗಿ ಕೆಲಸ ಮುಂದುವರೆಸಿ ಆಂಧ್ರದಲ್ಲಿ ರಾಜಕ್ಕ, ಮಹಿಳಾ ಚಳುವಳಿಯ ಆಗ್ರ ಸೇನಾನಿಯಾದರು. ತೆಲಂಗಾಣ ಚಳುವಳಿಯ ಸಮಯದ ಜನಪ್ರಿಯ ಹಾಡೊಂದನ್ನು ಸುಶ್ರಾವ್ಯವಾಗಿ ಆಕೆ ಹಾಡಿದಾಗ, ನೆರೆದ ಹಲವು ಮಹಿಳೆಯರು ದನಿಗೂಡಿಸಿದರೆ, ಹಲವರು ಭಾವಪರವಶರಾಗಿ ಕುಣಿಯಲು ಆರಂಭಿಸಿದರು.

ವಿಮಲಾ ರಣದಿವೆ

ಮಹಾದೇವ್ ದೇಸಾಯಿ ಮುಂತಾದ ವರೊಂದಿಗೆ ಕಾಂಗ್ರೆಸ್ ಸೇವಾ ದಳವನ್ನು



ವಿಮಲಾ 13 ವರ್ಷದಲ್ಲೇ ಸೇರಿದರು. ವಿದೇಶಿ ವಸ್ತುಗಳ ಪಿಕೆಟಿಂಗ್‌ಗಾಗಿ ಮೊದಲ ಬಾರಿ ಸೆರೆಮನೆ ಸೇರಿದಳು. ಆಮೇಲೂ ಹಲವು ಬಾರಿ ಸೆರೆಮನೆ ಸೇರಬೇಕಾಯಿತು. 1946ರ ರಿನ್ ದಂಗೆಗೆ ಕಾರ್ಮಿಕರ ಮಹಿಳೆಯರ ಸೌಹಾರ್ದ ಬೆಂಬಲ ಕಾರ್ಯಚರಣೆಯಲ್ಲಿ ಭಾಗವಹಿಸಿದ ವಿಮಲಾ, ಸ್ವಾತಂತ್ರ್ಯ ಬಂದಾಗ ಇದು ಜನತೆಗೆ ಬಂದ ಸ್ವಾತಂತ್ರ್ಯವಲ್ಲ ಎಂದು ಅರಿತರು. ಮಹಿಳಾ ಚಳುವಳಿಯ ಕೇಂದ್ರಬಿಂದುವಾದರು.

ತೆಲಂಗಾಣಾ ಸಶಸ್ತ್ರ ವಿಮೋಚನಾ ಹೋರಾಟದಲ್ಲಿ ಕುರಿಯರ್(ಸಂದೇಶವಾಹಕರಾಗಿ) ಕೆಲಸ ಮಾಡಿದ ಉದಯಂ ಆಂಧ್ರಪ್ರದೇಶದ ಸ್ವಾತಂತ್ರ್ಯ ಹೋರಾಟ ತಯಾರು ಮಾಡಿದ ಇನ್ನೊಂದು ರತ್ನ. ಆಕೆಯೂ ಕಮ್ಯುನಿಷ್ಟಳಾಗಿ ಆಂಧ್ರದ ಮಹಿಳಾ ಚಳುವಳಿಯ ನೇತೃತ್ವ ವಹಿಸಿದಳು. ಅವರು ಅನಾರೋಗ್ಯದಿಂದ ಸಮ್ಮೇಳನದಲ್ಲಿ ಹಾಜರಾಗಿರಲಿಲ್ಲ.

ಸ್ವಾತಂತ್ರ್ಯ ಚಳುವಳಿ ಸೇರಲು ಮನೆ ಬಿಟ್ಟು ಬಂದರು

ಬಂಗಾಳದ ಕನಕ ಆಗ ಅಲ್ಲಿ ಪ್ರಚಲಿತವಾಗಿದ್ದ ಉಗ್ರಗಾಮಿ ಸ್ವಾತಂತ್ರ್ಯ ಚಳುವಳಿಯಿಂದ ಆಕಷಿತರಾಗಿದ್ದವರು. ಚಿತ್ತಗಾಂಗ್ ಶಸ್ತ್ರಾಗಾರರಾದ ಮೇಲೆ ದಾಳಿ , ಸೂರ್ಯಸೇನ್ ಮುಂತಾದ ಕ್ರಾಂತಿಕಾರಿಗಳು ಸ್ಥಾಪಿಸಿದ ಭೂಗತ ಸಂಘಟನೆ ಕನಕಳನ್ನು ಬೀಸಿ ಕರೆಯಿತು. ವಿದ್ಯಾರ್ಥಿಯಾಗಿಯೂ ಸ್ವಾತಂತ್ರ್ಯ ಚಳುವಳಿಯ ಚಟುವಟಿಕೆ ಮುಂದುವರೆಸಿದ ಕನಕ "ಆಂದೋಲನದ ಆಟಂಬಾಂಬ್" ಮುಂಧೆ ಕಮ್ಯುನಿಸ್ಟ್ ಪಕ್ಷ ಸೇರಿದರು. ಪಶ್ಚಿಮ ಬಂಗಾಳದ ಮಹಿಳಾ ಚಳುವಳಿಯನ್ನು ಕಟ್ಟಿ ಬೆಳೆಸಿದರು. ಸಮಾಜವಾದ ಬರುವವರೆಗೆ ಆರಾಮವೆಂಬುದು ನನಗಿಲ್ಲ ಎಂದು ಸಾರಿದವರು ಕಾಮ್ರೆಡ್ ಕನಕ್ ಮುಖರ್ಜಿ

ಖಂಜನಿ ದೇಬ್ ಬರ್ಮನ್

ತ್ರಿಪುರಾದ ಬುಡಕಟ್ಟು ಜನಗಳ ಹೋರಾಟದ ಮೂಸೆಯಲ್ಲಿ ಮೂಡಿ ಬಂದವರು. ರಾಜನ ಪಾಳೆಯಗಾರೀ ದಮನದ ವಿರುದ್ಧ ಆರಂಭವಾದ ಹೋರಾಟದಲ್ಲಿ ಶಿಕ್ಷಣ ಮುಖ್ಯ ಬೇಡಿಕೆಯಾಯಿತು- ಹೋರಾಟ ಮುಖ್ಯ ಅಸ್ತ್ರವಾಯಿತು.

ಖಂಜನಿ ಅದರಲ್ಲಿ ಭಾಗವಹಿಸಿದರು. ನಂತರ ಜೀತದ ವಿರುದ್ಧ ಹೋರಾಟ, ಅದರ ಮುಂದುವರಿಕೆಯಾಗಿ ಜನವಾದಿ ಮಹಿಳಾ ಸಂಘಟನೆಯ ಹೋರಾಟ.



ಕರ್ನಾಟಕದ ಹೆಮ್ಮೆಯ ಸಾಲು ಮರದ ತಿಮ್ಮಕ್ಕನವರನ್ನು ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ವಿಶೇಷವಾಗಿ ಸನ್ಮಾನಿಸಲಾಯಿತು. ಅವರು ಸಮ್ಮೇಳನದ ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರೂ ಆಗಿದ್ದರು.

ಜನಗಳ ಕೊಳ್ಳುವ ಶಕ್ತಿ ಹೆಚ್ಚಿಸದ ಬಜೆಟ್

ಮಾರುಕಟ್ಟೆಯಲ್ಲಿರುವ ಸರಕುಗಳ ಅವಶ್ಯಕತೆಯಿರುವವರಿಗೆ ಕೊಳ್ಳುವ ಶಕ್ತಿಯಿಲ್ಲ, ಹೆಚ್ಚಿನ ಕೊಳ್ಳುವ ಶಕ್ತಿಯಿದ್ದವರಿಗೆ ಇವು ಬೇಕಿಲ್ಲ - ಅವರಿಗೆ ವಿದೇಶಿ ಸರಕುಗಳ ಖಯಾಲಿ. ಜನಸಾಮಾನ್ಯರ ಕೊಳ್ಳುವ ಶಕ್ತಿ ಹೆಚ್ಚಿಸುವುದು ಈಗಿನ ನಮ್ಮ ಆರ್ಥಿಕದ ಅವಶ್ಯಕತೆ. ಈಗಿನ ನಮ್ಮ ಆರ್ಥಿಕದ ಅವಶ್ಯಕತೆ. ಬಿಜೆಪಿ ಬಜೆಟ್ ಅದನ್ನು ಮಾಡುವುದಿಲ್ಲ ಎಂದಿದ್ದಾರೆ ಒಂದು ಪತ್ರಿಕಾ ಸಂದರ್ಶನದಲ್ಲಿ ಮಾತನಾಡುತ್ತಾ ಸೀತಾರಾಂ ಯಚೂರಿಯವರು. ಆ ಸಂದರ್ಶನವನ್ನು ಇಲ್ಲಿ ಕೊಡುತ್ತಿದ್ದೇವೆ.

ಈ ಬಜೆಟ್ಟಿಗೆ ಒಂದು ತತ್ತ್ವ ಇದೆಯೇ?

● ನನಗನಿಸುತ್ತದೆ ಈ ಬಜೆಟ್ಟಿಗೆ ಇಲ್ಲದಿರುವುದೆಂದರೆ ಒಂದು ಕಣ್ಣೋಟ. ಸ್ವಲ್ಪ ತತ್ತ್ವ ಅಲ್ಲಲ್ಲಿ ಎಸೆದಂತೆ ಇದೆ. ಕೆಲವೆಡೆ ಅದು ಮೂಡಿಬಂದಿದೆ. ಉದಾಹರಣೆಗೆ, ಸಾರ್ವಜನಿಕ ವಲಯವನ್ನು ಖಾಸಗೀಕರಿಸುವ ಪ್ರಶ್ನೆ. ಇದು ಬಹಳ ದಿನಗಳಿಂದ ಬಿಜೆಪಿಯ ಅಜೆಂಡಾದ ಭಾಗವಾಗಿರುವಂತದ್ದು. ಅದಿಲ್ಲಿ ಪ್ರತಿಫಲನಗೊಂಡಿದೆ. ಯಾವ ವೇಗ ಹಾಗೂ ದಿಕ್ಕಿನಲ್ಲಿ ಸಾರ್ವಜನಿಕ ವಲಯದ ಶೇರು ವಿಕ್ರಯ ನಡೆಯಬೇಕು ಎಂಬುದು ಒಂದರ್ಥದಲ್ಲಿ ಇಲ್ಲಿ ಪ್ರತಿಫಲನಗೊಂಡಿದೆ. ಇನ್ನೊಂದು ಅರ್ಥದಲ್ಲಿ ಅವರ ತತ್ವ ಪ್ರತಿಫಲನಗೊಂಡಿರುವುದು ರಾಷ್ಟ್ರೀಯ ಸ್ವಯಂಸೇವಕರ ಪಡೆಯನ್ನು ರಚಿಸುವ ಪ್ರಶ್ನೆಯಲ್ಲಿ. ವಾಸ್ತವವಾಗಿ ಅವರು ಆರ್.ಎಸ್.ಎಸ್.ನ್ನು ರಾಷ್ಟ್ರೀಕರಿಸುವ ಪ್ರಯತ್ನ ನಡೆಸಿದ್ದಾರೆ. ಈ ಅಂಶಗಳನ್ನು ಇಲ್ಲಿ ಕಾಣಬಹುದು. ಆದರೆ ಸಾರಾಂಶವೆಂದರೆ ಇದು ಯಾವುದೇ ಅರ್ಥದಲ್ಲೂ ಸ್ವದೇಶಿಯಲ್ಲದ ಅಭಿವೃದ್ಧಿ-ಮುಖಿಯೂ ಅಲ್ಲದ ಒಂದು ಬಜೆಟ್. ಅದು ಆ ಕ್ಷಣದಲ್ಲಿ ಕೈಗೆ ಸಿಕ್ಕಿದ್ದರ ಕಲಸುಮೇಲೋಗರ. ಈ ಪರಸ್ಪರ ತಿಕ್ಕಾಡುವ ಪಕ್ಷಗಳು ಅಧಿಕಾರಕ್ಕಾಗಿ ಒಟ್ಟಾಗಿ ರಚಿಸಿಕೊಂಡ ಸರಕಾರದ ಪ್ರತಿಫಲನವಿದು.

ಇದು ಸ್ವದೇಶಿ ಮತ್ತು ಸುಧಾರಣೆಗಳ ನಡುವೆ ಇರುವಂತದ್ದೆಂದು ನೀವು ಭಾವಿಸುತ್ತೀರಾ?

● ನನ್ನ ಅಭಿಪ್ರಾಯದಲ್ಲಿ ಇದರಲ್ಲಿ ಸ್ವದೇಶಿಯೇನೂ ಇಲ್ಲ. ಈ ಬಜೆಟ್ಟಿನ ಒತ್ತು ಇರುವುದು ಭಾರತೀಯ ಆರ್ಥಿಕವನ್ನು ವಿದೇಶೀ ಬಂಡವಾಳಕ್ಕೆ ತೆರೆಯುವಲ್ಲಿ. ಎಷ್ಟೇ ತಡೆತಡೆದು, ಎಷ್ಟೇ ಮಿತಿಯಲ್ಲಿ ಮಾಡಿದರೂ ಅದನ್ನು ಸುಧಾರಣೆಯ ದೃಷ್ಟಿಕೋನದಿಂದಲೇ ಮಾಡಲಾಗುತ್ತಿದೆ. ಆದರೆ ಅದು ಯಾವುದೇ ರೀತಿಯಲ್ಲಿ ಸ್ವಾವಲಂಬನೆಯನ್ನು ಕ್ರೋಢೀಕರಿಸುವುದಿಲ್ಲ. ದೊಡ್ಡ ಭಾರತೀಯ ವ್ಯಾಪಾರಸ್ಥರಿಗೆ ಹೆಚ್ಚು ರಿಯಾಯ್ತಿ ನೀಡಿರಬಹುದು, ಕೆಲವು ವಿಷಯಗಳಲ್ಲಿ ಕೊಟ್ಟಿದೆ. ಆದರೆ ಅವು ಯಾವುದೇ ರೀತಿಯಲ್ಲಿ ಭಾರತೀಯ ಆರ್ಥಿಕದ ಸ್ವಾವಲಂಬನೆಯನ್ನು ಕ್ರೋಢೀಕರಿಸುವುದಿಲ್ಲ. ಈ ಅರ್ಥದಲ್ಲಿ ಅದು ಸ್ವದೇಶಿಯೂ ಇಲ್ಲ.

ಅದು ದೇಶೀ ಉದ್ದಿಮೆಗೆ ರಕ್ಷಣೆ ಕೊಡುವಂತದ್ದೋ!

● ಕೆಲವೆಡೆ ಕೆಲವು ವಲಯಗಳಲ್ಲಿ ಬಾಲ್ಯಾವಸ್ಥೆಯಲ್ಲಿರುವ ಭಾರತೀಯ ಉದ್ದಿಮೆಗಳನ್ನು ಬಾಲ್ಯವನ್ನು ರಕ್ಷಿಸ ಬಯಸುವಲ್ಲಿ ಇದು ಸರಿಯಾದ ದಿಕ್ಕಿನಲ್ಲಿ ಇದೆಯೆನ್ನಬಹುದು. ಆದರೆ ದುರದೃಷ್ಟವಶಾತ್, ಹಣಕಾಸು ಮಂತ್ರಿಗಳು ನೀಡಿರುವ ಮಿಶ್ರಣ ಈ ವಲಯಗಳನ್ನು ಮತ್ತೆ ತಟ್ಟಿದೆ. ಉದಾಹರಣೆಗೆ 8% ಸುಂಕ ಎಲ್ಲಕ್ಕೂ ಎನ್ನುತ್ತದೆ ಅದು. ಆದರೆ ಅದು ಆಮದು ಸುಂಕವನ್ನು ನಿರ್ದಿಷ್ಟ ಸರಕುಗಳಿಗೆ ಇಳಿಸಿದೆ. ಇದರಲ್ಲಿ ಕಂಪ್ಯೂಟರ್ ಸಾಫ್ಟ್‌ವೇರ್ ಕೂಡಾ ಒಂದು. ಈಗಾಗಲೇ ಕಳೆದ ಎರಡು ಮೂರು ವರ್ಷಗಳಿಂದ ಇದು ತಟ್ಟಿದೆ. ಈಗಂತೂ ಇಂತಹ ಸ್ಪರ್ಧೆಎದುರಿಸಿ ನಿಲ್ಲಲೂ ಅದಕ್ಕೆ ಅಸಾಧ್ಯ. ಹಿಂದೆ ಬೆಳವಣಿಗೆಯ ವೇಗ ತೋರಿಸಿರುವಲ್ಲಿ ಅದು ಮತ್ತೆ ಪ್ರತಿಕೂಲ ಪರಿಣಾಮ ಬೀರಿದೆ. ಇದು ಭಾರತೀಯ ಉದ್ದಿಮೆಗೆ ಹುರುಪು ನೀಡುತ್ತದೆಯೇ ಎಂದು ಬಜೆಟ್ಟಿನ ಅಂಕಿ-ಅಂಶಗಳಿಂದ ಹೇಳುವುದು ಕಷ್ಟ.

ಹಣ ದುಬ್ಬರದ ಬಗ್ಗೆ....!

● ಅದನ್ನು ನಾನೊಪ್ಪುತ್ತೇನೆ. ಈ ಬಜೆಟ್ಟಿನ ಹಣದುಬ್ಬರಕಾರಿ ಪರಿಣಾಮ ರೈಲ್ವೇ ಬಜೆಟ್ಟಿನದರದೊಂದಿಗೂ ಸೇರಿಕೊಂಡಿದೆ. ಅಂಚೆ ದರಗಳ ಹೆಚ್ಚಳ, ಪೆಟ್ರೋಲ್ ದರ ಹೆಚ್ಚಳ, ಹಲವಾರು ಸರಕುಗಳ ಮೇಲೆ ಅಬಕಾರಿ ಸುಂಕ, ತೆರಿಗೆಗಳು ಹೆಚ್ಚಿದ್ದರಿಂದ ಹಣದುಬ್ಬರ ಬರುತ್ತದೆ. ಬ್ರಾಂಡ್ ಆದ ಸರಕುಗಳನ್ನು ಅಂದರೆ ಕಾರ್ಖಾನೆಗಳಲ್ಲಿ ತಯಾರಾದ ಸರಕುಗಳನ್ನು ಹಿಂಡುವ ದಾರಿಯನ್ನು ಬಜೆಟ್ ಹಿಡಿದಿದೆ. ಈಗ ಭಾರತದಲ್ಲಿ ಪ್ರತಿಮನೆಯೂ ಬಳಸುವ ಸರಕುಗಳು ಫ್ಯಾಕ್ಟರಿಗಳಲ್ಲೇ ತಯಾರಾಗಿರುತ್ತವೆ. ಏಕೆಂದರೆ ಹಲವು ವಲಯಗಳಲ್ಲಿ ಈಗ ಗುಡಿ ಕೈಗಾರಿಕೆಗಳೇ ಉಳಿದಿಲ್ಲ. ಹೀಗೆ ಇದೂ ಹಣದುಬ್ಬರ ತರುತ್ತದೆ.

ರೆವಿನ್ಯೂ ಗುರಿಗಳು ವಾಸ್ತವವೆನಿಸುತ್ತದೆಯೇ?

● ವಿಪರೀತ ಆಶಾವಾದಿಯೆನಿಸುತ್ತದೆ. ಆರ್ಥಿಕದಲ್ಲಿ ಏರಿಕೆ ಬರುತ್ತದೆ ಎಂಬ ನಿರೀಕ್ಷೆಯ ಮೇಲೆಯೇ ಬಹಳಷ್ಟು ಹಣಕಾಸು ಮಂತ್ರಿಗಳು ಅವಲಂಬಿಸಿದ್ದಾರೆ. ಲಾಕ್ಪರ್ ಕರ್ವ್(ಆದಾಯ ತೆರಿಗೆ ದರ ಕಮ್ಮಿಯಾದರೆ ತೆರಿಗೆ ಸಂಗ್ರಹ ಹೆಚ್ಚುತ್ತದೆ ಎಂಬ ಪರಿಕಲ್ಪನೆ ಕೆಲಸ ಮಾಡುವುದಿಲ್ಲ ಎಂದು ನಾವು ವಾದಿಸುತ್ತಾ ಬಂದಿದ್ದೇವೆ. ಕಳೆದ ವರ್ಷ ಅದು ನಿಜವಾಗಿದೆ. ಅಮೆರಿಕದಲ್ಲೂ ಅದು ನಡೆದಿಲ್ಲ. ಎಲ್ಲೂ ನಡೆಯುವುದಿಲ್ಲ. ಆದ್ದರಿಂದ ರೆವಿನ್ಯೂ ಸಂಗ್ರಹದಲ್ಲಿ ಭಾರೀ ಕಡಿತ ಕಾಣಲಿದೆ.

ಬಜೆಟ್-ನಂತರದ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಸರಕಾರ ಸೋತಿದೆ. ಅದೊಂದು ಅಭೂತಪೂರ್ವ ವಿಷಯ. ಬಜೆಟ್‌ನಲ್ಲಿ ಪ್ರಕಟಿಸಿರುವ ಏರಿಕೆಯೆಂದು, ವಾಸ್ತವದಲ್ಲಿ ಹಣಕಾಸು ಮಂತ್ರಿಗಳು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಗುವುದು- ಇದು ಹಿಂದೆಂದೂ ನಡೆದಿರಲಿಲ್ಲ ಎಂಬುದು ಸ್ಪಷ್ಟ. ಪೆಟ್ರೋಲ್ ಪ್ರಶ್ನೆಯನ್ನೇ ತಗೊಳ್ಳಿ. ಒಂದು ನಿರ್ಧಾರ ತಗೊಳ್ಳಲಾಗಿತ್ತು. ಈಗಲ್ಲ ಬಹಳ ವರ್ಷಗಳ ಹಿಂದೆ. ಏನೆಂದರೆ ಯಾವುದೇ ಅಬಕಾರಿ, ಕಸ್ಟಮ್ಸ್ ಸುಂಕ ಹೆಚ್ಚಳವನ್ನು ತೈಲ ನಿಧಿ ಕೊರತೆಯಲ್ಲಿ ಸಂಗ್ರಹಿಸಬಾರದು, ಬಳಕೆದಾರರಿಗೆ ವರ್ಗಾಯಿಸಬೇಕು ಎಂದು. ಒಂದೋ ಹಣಕಾಸು ಮಂತ್ರಿಯವರಿಗೆ ಇದು ಗೊತ್ತಿಲ್ಲ. ಆಗ ಇಡೀ ಸನ್ನಿವೇಶದ ಬಗ್ಗೆ ಅವರ ಜ್ಞಾನದ ಮಟ್ಟವನ್ನು ಇದು ತೋರಿಸುತ್ತದೆ ಅಥವಾ ಗೊತ್ತಿದ್ದರೆ ಬಜೆಟ್ ತಯಾರಿಸಿದವರ ಅತೀ ದೊಡ್ಡ ಗೊಂದಲ ಕಾಣುತ್ತದೆ.

ಯೂರಿಯಾ ವಿಷಯವೂ ಅಷ್ಟೆ. ಒಂದು ಮೋಸದ ತರ್ಕವನ್ನು ಮುಂದಿಡಲಾಯಿತು. ರಸಗೊಬ್ಬರ ಬಳಕೆಯ ಅಸಮತೋಲನವನ್ನು ಸರಿಪಡಿಸಬೇಕು. ನಿಜ, ಆದರೆ ಅದಕ್ಕೆ ಹಣಕಾಸು ಮಂತ್ರಿಗಳು ಹೇಳಿದಂತೆ ಯೂರಿಯಾ ಬೆಲೆ ಹೆಚ್ಚಿಸುವುದು ಮಾತ್ರ ದಾರಿಯಲ್ಲ. ಇತರ ರಸಗೊಬ್ಬರಗಳ ಬೆಲೆ ಇಳಿಸಿಯೂ ಮಾಡಬಹುದು.

ಉದ್ದಿಮೆಗಳ ಪುನರುಜ್ಜೀವನಕ್ಕೆ ಬಜೆಟ್ ನೆರವಾಗುತ್ತದೆಯೇ?

● ಇಲ್ಲ, ಅದರ ಬದಲು ಉದ್ದಿಮೆ ಬೆಳವಣಿಗೆಯಲ್ಲಿನ ಮಂದಗತಿಯನ್ನು ಉಲ್ಬಣಗೊಳಿಸುತ್ತದೆ. ಕಳೆದ ಎರಡು ವರ್ಷಗಳನ್ನು ನೋಡಿದರೆ ಸರಿಯಾದ ಆಂತರಿಕ ಬೇಡಿಕೆಯಿಲ್ಲದೆ ಸ್ಥಗಿತತೆ ಪ್ರವೃತ್ತಿ ಬೆಳೆದದ್ದು ಕಾಣುತ್ತದೆ. ಈಗ ತೆರಿಗೆ ದರ ಇಳಿಸಿರುವಾಗ ಇದರಿಂದ ಬೇಡಿಕೆ ಹೆಚ್ಚಾಗಬಹುದು ಎಂಬ ನಿರೀಕ್ಷೆ ಇಟ್ಟು ಕೊಳ್ಳಲಾಗಿತ್ತು. ಇದರಿಂದ ಉದ್ದಿಮೆಗಳು ಚುರುಕುಗೊಳ್ಳಬಹುದು ಎಂದು ಭಾವಿಸಲಾಗಿತ್ತು. ಆದರೆ ಹಾಗಾಗಲಿಲ್ಲ. ಏಕಾಗಲಿಲ್ಲ ಎಂದು ಈ ಬಜೆಟ್ ಪರೀಕ್ಷಿಸುವುದೇ ಇಲ್ಲ. ಕಳೆದೆರಡು ವರ್ಷಗಳಲ್ಲಿ ಆಂತರಿಕ ಬೇಡಿಕೆ ಏಕೆ ಹೆಚ್ಚಲಿಲ್ಲ ಎಂದರೆ ಮಾರುಕಟ್ಟೆಯಲ್ಲಿ ಸಿಗುವ ಸರಕಿನ ಅವಶ್ಯಕತೆ ಇರುವವರಿಗೆ ಕೊಳ್ಳುವ ಶಕ್ತಿಯಿಲ್ಲ, ಹೆಚ್ಚು ಕೊಳ್ಳುವ ಶಕ್ತಿ ಇರುವವರಿಗೆ ಮಾರುಕಟ್ಟೆಯಲ್ಲಿರುವುದು ಬೇಕಿಲ್ಲ, ಏಕೆಂದರೆ ಅದಾಗಲೇ ಅವರ ಬಳಿಯಿದೆ. ಇದೀಗ ಭಾರತದ ವಾಸ್ತವತೆ. ದುಡ್ಡಿದ್ದವರಬಳಿ ಆಗಲೇ ಮಾರುಕಟ್ಟೆಯಲ್ಲಿ ರುವುದು ಇದೆ. ಅವರಿಗೆ ಆಮದು ಸರಕುಗಳದೇ ಖಯಾಲಿ. ಅದರಿಂದ ಆಮದು ಹೆಚ್ಚಿ ವ್ಯಾಪಾರ ಕೊರತೆ ಜಾಸ್ತಿಯಾಗಿ ಬೇರೆಲ್ಲಾ ದುಷ್ಪರಿಣಾಮಗಳೂ ಆಗುತ್ತವೆ.

ಆದ್ದರಿಂದ ನಿಜ ಪ್ರಶ್ನೆಯೆಂದರೆ ಜನಗಳ ಕೊಳ್ಳುವ ಶಕ್ತಿ ಹೆಚ್ಚಿಸುವುದು. ಈ ಬಜೆಟ್ ಅದನ್ನು ಮಾಡುವುದಿಲ್ಲ - ತೆರಿಗೆ ನೀತಿಗಳಿಂದಾಗಿ.

ಬಜೆಟೊಂದು ತಮಾಷೆ! 'ಸಮರ್ಥ' ಸರಕಾರದ ಅಸಮರ್ಥತೆ?

1998-99 ರ ಬಜೆಟ್ ಮೂಲಕ ವಾಜಪೇಯಿ ಸರಕಾರ ಒಂದು ತಮಾಷೆಯನ್ನೇ ಪ್ರದರ್ಶಿಸಿದೆ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಡಾ|| ಸಿ.ಪಿ.ಚಂದ್ರಶೇಖರ್.

ಬಜೆಟ್ ಮಂಡಿಸಿದ 18 ಗಂಟೆಯೊಳಗೆ ಹಣಕಾಸು ಮಸೂದೆಯ ಎರಡು ಅಂಶಗಳನ್ನು ವಾಪಸು ಪಡೆಯಲಾಯಿತು. ಯೂರಿಯಾ ಬೆಲೆ ಏರಿಕೆಯಿಂದ ಸುಮಾರು 1000 ಕೋಟಿ ರೂ, ಪೆಟ್ರೋಲ್ ಬೆಲೆಯೇರಿಕೆ ಯಿಂದ ಸುಮಾರು 2300 ಕೋಟಿ ರೂ. ಸಂಗ್ರಹಿಸುವ ಯೋಜನೆಯಿತ್ತು. ಆದರೆ 18 ಗಂಟೆಗಳೊಳಗೆ ಯೂರಿಯ ಬೆಲೆ ಏರಿಕೆಯನ್ನು ವಾಪಸು ಪಡೆದು 1000 ಕೋಟಿ ರೂ. ಹೋದರೆ, ಪೆಟ್ರೋಲ್ ದರ ಏರಿಕೆಯನ್ನು 1 ರೂಗೆ ಮಿತಗೊಳಿಸಿ ಬಜೆಟ್ ಖೋತಾವನ್ನು ತೈಲ ನಿಧಿಗೆ ಮತ್ತೊಮ್ಮೆ ವರ್ಗಾಯಿಸಲಾಯಿತು. ಈ ಎರಡು ಕ್ರಮಗಳಿಂದ ಇಡೀ ಬಜೆಟ್ ಲೆಕ್ಕಾಚಾರವನ್ನೇ ಮತ್ತೊಮ್ಮೆ ಮಾಡಬೇಕಾಗುತ್ತದೆ.

ಬಿಜೆಪಿ ಸರಕಾರ ಏಕೆ ಈ ಕ್ರಮಕ್ಕಿಳಿಯಬೇಕಾಯಿತು? ಇದು ಎಲ್ಲರಿಗೂ ಸ್ಪಷ್ಟ - ಈ ಎರಡು ಬೆಲೆಯೇರಿಕೆಗಳ ಆರ್ಥಿಕ ದುಷ್ಪರಿಣಾಮಗಳನ್ನು, ತನಗೆ ಆಗಬಹುದಾದ ರಾಜಕೀಯ ದುಷ್ಪರಿಣಾಮಗಳನ್ನು ಅರಿಯಲು ಈ ಸರಕಾರಕ್ಕೆ 18 ಗಂಟೆಗಳು ಬೇಕಾದವು. ಈ ಸೂಚನೆಗಳನ್ನು ತಯಾರಿಸುವ ಮೊದಲು ವಾರಗಟ್ಟಲೆ ಬಜೆಟ್ ಪೂರ್ವ ಚರ್ಚೆ ನಡೆದಿರುತ್ತದೆಂಬುದನ್ನು ಗಮನಿಸಿದರೆ ಒಂದೆಡೆ ಇದು ಬಿಜೆಪಿ ಸರಕಾರದ ಅಸಮರ್ಥತೆಯನ್ನು ಪ್ರದರ್ಶಿಸಿದರೆ ಇನ್ನೊಂದೆಡೆ ಇನ್ನೂ ಆಳವಾದ ಸಮಸ್ಯೆಯತ್ತ ಗಮನ ಸೆಳೆಯಬೇಕು - ಅದೆಂದರೆ ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶಿಸುವ 'ಉದಾರ' ಚೌಕಟ್ಟನ್ನು ಮುಂದುವರೆಸುವ ಬಿಜೆಪಿಯ ನಿರ್ಧಾರ. 1991 ರಿಂದ ಅನುಸರಿಸಿಕೊಂಡು ಬಂದಿರುವ ಈ 'ಉದಾರ' ವ್ಯವಸ್ಥೆಯಲ್ಲಿ ಸರಕಾರಕ್ಕೆ ಹೆಚ್ಚಿನ ಆಯ್ಕೆಗಳೇನೂ ಇಲ್ಲ. ನೇರ ಆದಾಯ ಹೆಚ್ಚಿಸಿಕೊಳ್ಳುವಂತಿಲ್ಲ. ಆದ್ದರಿಂದ ಖರ್ಚು ಕಮ್ಮಿ ಮಾಡಿಕೊಳ್ಳಬೇಕು. ಆದರೆ ಬಿಜೆಪಿ ಸರಕಾರಕ್ಕೆ ತನ್ನ ಜನಪ್ರಿಯತೆ ತೋರಲು ಖರ್ಚು ಹೆಚ್ಚಿಸಬೇಕು. ಆಗ ಅದಕ್ಕಿರುವ ಒಂದೇ ದಾರಿಯೆಂದರೆ ದುಡಿಯುವ ಜನಗಳ, ಮಧ್ಯಮ ವರ್ಗಗಳ ನಿಜ ಆದಾಯವನ್ನು ಹಿಂಡುವ ಹಣದುಬ್ಬರಕಾರೀ ಕ್ರಮಗಳು ಎನ್ನುತ್ತಾರೆ ಈ ಅರ್ಥಶಾಸ್ತ್ರಜ್ಞರು.

ಐ.ಎಂ.ಎಫ್-ವಿಶ್ವಬ್ಯಾಂಕ್ ತಂತ್ರದ ಪ್ರಕಾರ ನೇರ ತೆರಿಗೆಗಳನ್ನು ಕಡಿಮೆ ಮಾಡಬೇಕು. ಆದರೆ ಹಣಕಾಸು ಕೊರತೆ ಹೆಚ್ಚಬಾರದು. ಇದರರ್ಥ ಸಾರ್ವಜನಿಕ ಖರ್ಚುಗಳನ್ನು (ಶಿಕ್ಷಣ, ಆರೋಗ್ಯ ಇತ್ಯಾದಿಗಳಿಗೆ ಮಾಡುವ ಖರ್ಚನ್ನು) ಕಮ್ಮಿ ಮಾಡಬೇಕು. ತೆರಿಗೆ ರಿಯಾಯ್ತಿಗಳು, ಇತರ ಪ್ರೋತ್ಸಾಹಕಗಳಿಂದ ಖಾಸಗೀ ಹಣ ನಿವೇಶನ ಹೆಚ್ಚಿದ್ದರೆ ಬಹುಶಃ ಈ ಸಮಸ್ಯೆ ಯಾಗುತ್ತಿರಲಿಲ್ಲ. ಆದರೆ ಹಾಗಾಗಲಿಲ್ಲ. ಅವರಿಗೆ ಉದಾರವಾದ ಕ್ರಮಗಳಿಂದ ದೇಶದ ಆರ್ಥಿಕಕ್ಕೇನೂ ಸಿಗಲಿಲ್ಲ.

ಇಂತಹ ಸಂದರ್ಭದಲ್ಲಿ ಆರ್ಥಿಕವನ್ನು ಮತ್ತೆ "ಒದ್ದು ಆರಂಭಿಸಲು" ಇತ್ತೀಚಿನ ವರ್ಷಗಳ ಹಣಕಾಸು ನಿಲುವನ್ನು ಬದಲಿಸಬೇಕಿತ್ತು ಎನ್ನುತ್ತಾರೆ ಡಾ|| ಸಿ.ಪಿ.ಚಂದ್ರಶೇಖರ್

ಹೊಸ ನಿಲುವು ಹೀಗಿರಬೇಕಿತ್ತು -

1. ನೇರ ತೆರಿಗೆಗಳನ್ನು ಹೆಚ್ಚಿಸಿ ಬಂಡವಾಳ ಖರ್ಚನ್ನು ನಿರ್ವಹಿಸಿದರೆ ಇದು ಬೇಡಿಕೆಯಲ್ಲಿ ಹೆಚ್ಚಳ ತರುತ್ತಿತ್ತು. ಪೂರೈಕೆಯ ಅಡೆ-ತಡೆಗಳನ್ನು ನಿವಾರಿಸುತ್ತಿತ್ತು ಹಾಗೂ ಖಾಸಗಿ ಹಣ ನಿವೇಶನಕ್ಕೆ ಮತ್ತೆ ಉತ್ಸಾಹ ಬರುತ್ತಿತ್ತು.

2. ಕಸ್ಟಮ್ಸ್ ಸುಂಕಗಳಲ್ಲಿ ಗಮನಾರ್ಹ ಹೆಚ್ಚಳ ತಂದು ಹೆಚ್ಚಿನ ಆದಾಯವನ್ನು ಶೇಖರಿಸಬಹುದಿತ್ತು. ಅಲ್ಲದೆ ಇತ್ತೀಚಿನ ವರ್ಷಗಳ ಆಮದು ಉದಾರೀಕರಣ ತಟ್ಟಿದ ಉದ್ದಿಮೆಗಳು ಪುನರುಜ್ಜೀವನಗೊಳ್ಳುವಂತಾಗುತ್ತಿತ್ತು.

ಅಂದರೆ 1991 ರಿಂದ ಅನುಸರಿಸಿದ ನೀತಿಗಳನ್ನು ಸಂಪೂರ್ಣ ಬದಲಿಸಬೇಕಿತ್ತು. ಆದರೆ ಬಿಜೆಪಿ 'ದೇಶ ಪ್ರೇಮ'ದ ಬಗ್ಗೆ ಎಷ್ಟೇ ಅರಚಾಡಿದರೂ ಹಿಂದಿನ ಸರಕಾರಗಳಿಗಿಂತ ಭಿನ್ನವಾದ ಆರ್ಥಿಕ ಕಾರ್ಯತಂತ್ರ ಅಂಗೀಕರಿಸಲು ವಾಜಪೇಯಿ ಸರಕಾರವೂ ಸಿದ್ಧವಿಲ್ಲ. ಆದರೆ ಸಾಮಾಜಿಕ ವಲಯದಲ್ಲಿ, ಮೂಲಭೂತ ರಚನೆಯ ಲ್ಲಾಗಲಿ ಸಾರ್ವಜನಿಕ ಖರ್ಚು ಹೆಚ್ಚಿಸುವ ಭರವಸೆಯನ್ನು ಈಡೇರಿಸಬೇಕು! ಈ ಚೌಕಟ್ಟಿನೊಳಗೆ ಈಡೇರಿಸುವ ಪ್ರಯತ್ನವೇ ಮೇಲೆ ಹೇಳಿದ ತಮಾಷೆಗೆ ಕಾರಣ.

ಪರೋಕ್ಷ ತೆರಿಗೆಗಳನ್ನು ಹೆಚ್ಚಿಸಲಾಯಿತು. ಇದರಲ್ಲಿ 'ಸ್ವದೇಶಿ'ಯ ಮಾತು ಏನೇ ಇದ್ದರೂ ಕಸ್ಟಮ್ಸ್ ಸುಂಕಗಳ ಬದಲು ಅಬಕಾರಿ ಸುಂಕಗಳನ್ನೇ ಹೆಚ್ಚಿಸಲಾಯಿತು. (ಕಸ್ಟಮ್ಸ್ ಸುಂಕಗಳಿಂದ ನಿರೀಕ್ಷಿಸುವ ಆದಾಯ 3304 ಕೋಟಿ ರೂ.ಗಳಾದರೆ, ಅಬಕಾರಿ ಸುಂಕಗಳಿಂದ 5000 ಕೋಟಿ ರೂ.) ಜೊತೆಗೆ ಖಾಸಗೀಕರಣವನ್ನು ಭರದಿಂದ ಮುಂದುವರೆಸುವ ಇರಾದೆ. ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ವಿಕ್ರಯದಿಂದ 5000 ಕೋಟಿ ರೂ. ಸಂಗ್ರಹಿಸುವುದಾಗಿ ಬಿಜೆಪಿ ಬಜೆಟ್ ಹೇಳಿದೆ. ಕಳೆದ ಬಾರಿ ಬಜೆಟ್‌ನಲ್ಲಿ ಹೇಳಿದ್ದು 4800 ಕೋಟಿ ರೂ. ಸಂಗ್ರಹಿಸಿದ್ದು ಕೇವಲ 906 ಕೋಟಿ ರೂ. ಆದರೂ ಈ ವರ್ಷ 5000 ಕೋಟಿ ರೂ. ಬಜೆಟ್ ನಿರೀಕ್ಷೆಯಿದೆಯೆಂದರೆ ಬಿಜೆಪಿ ಸರಕಾರ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರಿ ತಿನ್ನುವ ಹುನ್ನಾರ ಇಟ್ಟುಕೊಂಡಂತಿದೆ.

ಆದರೆ ಇವೆಲ್ಲಾ ಕ್ರಮಗಳಿಂದ ಹಣಕಾಸು ಕೊರತೆ ಏರುವುದು ಖಂಡಿತ ಎನ್ನುವ ಡಾ|| ಚಂದ್ರಶೇಖರ್ ಅವರು ಪರಮಾಣು ಪರೀಕ್ಷೆಯಿಂದಾಗಿ ಬಂದಿರುವ ದಿಗ್ಬಂಧನಗಳ ಹಿನ್ನೆಲೆಯಲ್ಲಿ ಬಂಡವಾಳ ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಗಳಲ್ಲಿನ ಅಸ್ಥಿರತೆಯಲ್ಲಿ ಇಂತಹ ಒಂದು ಅಸಮರ್ಥ ಹಾಗೂ ತಮಾಷೆಯ ಮಟ್ಟಕ್ಕಿಳಿದ ಬಜೆಟ್ ಆರ್ಥಿಕ ನಿರ್ವಹಣೆ ಮಾಡಬಲ್ಲುದೇ ಎಂಬ ವಿಶ್ವಾಸ ಹಲವರಲ್ಲಿ ಕುಂದುತ್ತಿದೆ. ಇದರಿಂದ ಬಂಡವಾಳ ಮತ್ತು ವಿದೇಶಿ ವಿನಿಮಯ ಮಾರಕಟ್ಟೆಯಲ್ಲಿ ಬಿಕ್ಕಟ್ಟು ಬರುವ ಬೆದರಿಕೆಯಿದೆ ಎನ್ನುತ್ತಾ ಬಿಜೆಪಿ ತಯಾರಿಸುತ್ತಿರುವ ರಾಷ್ಟ್ರಾಂಧತೆ ಮತ್ತು ಸಾಮ್ರಾಜ್ಯಶಾಹಿಯೊಂದಿಗೆ ರಾಜಿಯ ಉನ್ಮಾದಕರ ಮಿಶ್ರಣದ ಅನಿವಾರ್ಯ ದುಷ್ಫಲ ಇದು ಎಂದು ಡಾ|| ಚಂದ್ರಶೇಖರ್ ಹೇಳುತ್ತಾರೆ.

51 ಲಕ್ಷ ಸದಸ್ಯತ್ವದ ಕ್ರಿಯಾಶೀಲ ಸಂಘಟನೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಮಹಿಳೆಯರ ವಿಮೋಚನೆ, ಸಮಾನತೆ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿರುವ, ಪ್ರಗತಿಪರ ಆಲೋಚನೆಯುಳ್ಳ ಒಂದು ಸಂಘಟನೆ. ಜಾತಿ, ವರ್ಗ, ಧರ್ಮಗಳ ಬೇಧ-ಭಾವವಿಲ್ಲದೆ ಎಲ್ಲ ಮಹಿಳೆಯರ ಒಳಿತಿಗಾಗಿ ಅದರಲ್ಲೂ ಪ್ರಮುಖವಾಗಿ ಬಡ ಹಾಗೂ ಕಾರ್ಮಿಕ ವರ್ಗದ ಮಹಿಳೆಯರ ಬದುಕನ್ನು ಹಸನು ಮಾಡಲು ಶ್ರಮಿಸುತ್ತಿರುವ ಸಂಘಟನೆ.

ಒಂದೂವರೆ ದಶಕಕ್ಕಿಂತಲೂ ಹೆಚ್ಚಿನ ಇತಿಹಾಸವುಳ್ಳ (1981-ಸ್ಥಾಪನೆ) ಜನವಾದಿ ಮಹಿಳಾ ಸಂಘಟನೆ ಅಖಿಲ ಭಾರತ ಮಟ್ಟದ ಕ್ರಿಯಾಶೀಲ ಸಂಘಟನೆ. ದೇಶದ 18 ರಾಜ್ಯಗಳಲ್ಲಿ ಒಟ್ಟು 51 ಲಕ್ಷ ಸದಸ್ಯರನ್ನು ಒಳಗೊಂಡಿರುವ ನಮ್ಮ ಸಂಘಟನೆಯ ಹಲವು ರಾಜ್ಯ ಸಮಿತಿಗಳು ಸ್ವಾತಂತ್ರ್ಯ ಪೂರ್ವದಿಂದಲೂ ಅಸ್ತಿತ್ವದಲ್ಲಿದ್ದವು ಎಂಬುದು ಗಮನಾರ್ಹ. ಸ್ವಾತಂತ್ರ್ಯಪೂರ್ವದಲ್ಲಿಯೇ ಸಾಮ್ರಾಜ್ಯಶಾಹಿಗಳ ವಿರುದ್ಧ, ದುಡಿಯುವ ವರ್ಗದ ಪರವಾದ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದವು. ಅಂದಿನಿಂದ ಇಂದಿನವರೆಗೂ ಜನವಾದಿ ಮಹಿಳಾ ಸಂಘಟನೆಯ ತೆಕ್ಕೆಯಲ್ಲಿ ಹಳ್ಳಿಗಳಿಂದ ಹಿಡಿದು ನಗರಗಳವರೆಗೆ ಎಲ್ಲಾ ವರ್ಗ-ಉದ್ಯೋಗಗಳಲ್ಲಿರುವ ಮಹಿಳೆಯರು, ವಿಶ್ವ ವಿದ್ಯಾಲಯಗಳ ಪ್ರೊಫೆಸರ್‌ಗಳು, ವಿಜ್ಞಾನಿಗಳು, ಮಧ್ಯಮ ವರ್ಗದ ಉದ್ಯೋಗಿಗಳು, ಬೀಡಿ ಕಾರ್ಮಿಕರು, ಗಣಿ ಕಾರ್ಮಿಕರು ಮೊದಲಾದವರು ಸದಸ್ಯರಾಗಿದ್ದಾರೆ.

ಜನಪರ ಕಣ್ಣೋಟ

ಭಾರತದಲ್ಲಿ ಬಹುಸಂಖ್ಯಾತ ಮಹಿಳೆಯರು ಲಿಂಗಾಧಾರಿತ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತ ವರ್ಗ, ಶೋಷಿತ ವರ್ಗ ಅಥವಾ ಕೆಳಜಾತಿಗೆ ಸೇರಿದ ಮಹಿಳೆಯರು ನಮ್ಮ ಸಾಮಾಜಿಕ ವ್ಯವಸ್ಥೆಯ ಕಾರಣದಿಂದಾಗಿ ಮತ್ತಷ್ಟು ತುಳಿತಕ್ಕೆ ಒಳಗಾಗಿರುವುದು ದುರಂತ. ಭಾರತದ ಸಂದರ್ಭದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಈ ಎಲ್ಲ ದೃಷ್ಟಿಕೋನಗಳಿಂದ ಗಮನಿಸಬೇಕಾದ್ದು ಅಗತ್ಯ ಎನ್ನುತ್ತದೆ ಈ ಸಂಘಟನೆ.

ಜಮೀನ್ದಾರಿ ವರ್ಗ ಹಾಗೂ ಬಂಡವಾಳಶಾಹಿ ವರ್ಗಗಳ ಸಂಕುಚಿತ ನೀತಿಗಳ ಪ್ರತಿನಿಧಿಯಂತಿರುವ ಭಾರತದ ಆಳುವ ವರ್ಗ ತನ್ನ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಪುರುಷ ಪ್ರಧಾನ ವ್ಯವಸ್ಥೆಯನ್ನು ಬಲಪಡಿಸುತ್ತಲೇ ಬಂದಿದೆ. ಅನೇಕ ಮಹಿಳಾ ವಿರೋಧಿ ಆಚರಣೆಗಳನ್ನು ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಪುನರುಜ್ಜೀವನಗೊಳಿಸ ಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಮಹಿಳೆಯರ ವಿಮೋಚನೆ ಎನ್ನುವುದು ಒಟ್ಟು ಸಾಮಾಜಿಕ ಪರಿಸ್ಥಿತಿಯಲ್ಲಿ ತರಬೇಕಾದ ಮೂಲಭೂತ ಬದಲಾವಣೆಯಾಗಿರುತ್ತದೆ. ಆದ್ದರಿಂದ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳನ್ನು ಒಟ್ಟು ಸಾಮಾಜಿಕ- ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳ ಸಂಬಂಧಿತ ವಿಷಯವಾಗಿ ಪರಿಗಣಿಸಬೇಕೆ ಹೊರತು, ಈ ಎಲ್ಲ ವಾಸ್ತವಗಳಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಅಥವಾ ಕೇವಲ ಮಹಿಳೆ ಮತ್ತು ಪುರುಷನ ನಡುವಿನ ಸಂಬಂಧದ ಪ್ರಶ್ನೆಯಾಗಿ ಪರಿಗಣಿಸಲಾಗು ವುದಿಲ್ಲ ಎಂಬುದು ಈ ಸಂಘಟನೆಯ ಕಣ್ಣೋಟ.

ಉದಾಹರಣೆಗೆ ಕುಟುಂಬಗಳಲ್ಲಿ ಹಾಗೂ ಹೊರಗಿನ ಸಮಾಜದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯಗಳನ್ನು ಎದುರಿಸುವಾಗ, ಪ್ರತಿಭಟಿಸುವಾಗ ದೌರ್ಜನ್ಯಕ್ಕೆ ಒಳಗಾದ ಮಹಿಳೆಯ ಪರವಾಗಿ ಸ್ಥಳೀಯವಾದ ಎಲ್ಲ ವರ್ಗದ ಜನರೂ ಒಂದಾಗಬೇಕೆ ಹೊರತು ಆಕೆ ಮಹಿಳೆ ಎಂಬ ಕಾರಣಕ್ಕೆ ಕೇವಲ ಮಹಿಳೆಯರು ಈ ಪ್ರಶ್ನೆ ಎದುರಿಸಬೇಕೆಂಬುದಾಗಲೀ ಅಥವಾ ದೌರ್ಜನ್ಯಕ್ಕೆ ಒಳಗಾದ ಮಹಿಳೆ ಒಂದು ನಿರ್ದಿಷ್ಟ ವರ್ಗ ಅಥವಾ ಜಾತಿಗೆ ಸೇರಿದವಳೆಂದು ಆ ವರ್ಗ ಅಥವಾ ಜಾತಿಯ ಜನರು ಮಾತ್ರ ಒಂದಾಗಬೇಕೆಂಬುದಾಗಲಿ ಜನವಾದಿ ಮಹಿಳಾ ಸಂಘಟನೆಯ ನಿಲುವಲ್ಲ. ಮಹಿಳೆಯರ ಮೇಲೆ ಆರೋಪಿಸಲಾಗಿರುವ ಆರ್ಥಿಕ ಪರಾವಲಂಬನೆ ಹಾಗೂ ಸಾಂಪ್ರದಾಯಿಕ ಮಾದರಿಗಳನ್ನು ಮಹಿಳೆಯ ಪರವಾದ ಎಲ್ಲಾ ಹೋರಾಟಗಳು ಹೊರ ಗೆಡವಬೇಕಿದೆ. ಈ ರೀತಿಯ ಸಾಂಪ್ರದಾಯಿಕ ಸಂಕೋಲೆಗಳನ್ನು ಮುರಿಯಲು ಬೇಕಾದಂತಹ ಚಳುವಳಿ ಯನ್ನು ಮಹಿಳಾ ಸಂಘಟನೆಗಳು ಕಟ್ಟುವ ಅಗತ್ಯವಿದೆ ಎಂದು ಈ ಸಂಘಟನೆ ಹೇಳುತ್ತದೆ.

ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ನಡೆಸುವ ಹೋರಾಟಗಳಲ್ಲಿ ಭಾಗವಹಿಸುವ ಅಸಂಖ್ಯಾತ ಮಹಿಳೆಯರ ಬದುಕನ್ನು ಸುಂದರಗೊಳಿಸಲು ಅವರ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸುವುದು, ದೇಶದ ಉದ್ದಗಲಕ್ಕೆ ಹರಡಿಕೊಂಡಿರುವ ಇತರೆ ಮಹಿಳಾ ಸಂಘಟನೆಗಳೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸುವ ಮೂಲಕ ಮಹಿಳಾ ಚಳುವಳಿಯನ್ನು ಬಲಿಷ್ಟಗೊಳಿಸುವುದು ಜನವಾದಿ ಮಹಿಳಾ ಸಂಘಟನೆ ತನ್ನ ಉದ್ದೇಶವಾಗಿಸಿಕೊಂಡಿದೆ.

ಮಹಿಳೆಯರ ಪರವಾದ ಹೋರಾಟದಲ್ಲಿ ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು, ಯುವಜನ ಹಾಗೂ ವಿದ್ಯಾರ್ಥಿ ಸಂಘಟನೆಗಳು ಹಾಗೂ ವೃತ್ತಿಪರ ಸಂಘ-ಸಂಸ್ಥೆಗಳೆಲ್ಲವೂ ಪಾಲ್ಗೊಳ್ಳಬೇಕು ಎಂಬ ನಿಲುವಿನ ಇದು ಕೋಮುವಾದ ವಿರೋಧಿ ಹೋರಾಟ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ, ಸ್ವಾವಲಂಬನೆ ಪರವಾದ ಹೋರಾಟ ಹಾಗೂ ಜನವಿರೋಧಿ ನೀತಿಗಳ ವಿರುದ್ಧದ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಚಟುವಟಿಕೆಗಳು:

ಈ ಸಂಘಟನೆಯು ಮಹಿಳೆಯರ ಸಮಸ್ಯೆಗಳನ್ನು ಲಿಂಗಾಧಾರಿತ ಸಮಸ್ಯೆಯಾಗಿ ಹಾಗೂ ವರ್ಗ ಸಂಘರ್ಷವಾಗಿ ಪರಿಗಣಿಸುತ್ತದೆ. ಹಾಗೂ ಈ ಹಿನ್ನೆಲೆಯಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದೆ.

ಕೌಟುಂಬಿಕ ದೌರ್ಜನ್ಯಗಳಿಗೆ ಬಲಿಯಾದ ಮಹಿಳೆಯರಿಗೆ ಕಾನೂನು ಸಲಹಾ ಕೇಂದ್ರಗಳು ಹಾಗೂ ಕಾನೂನು ನೆರವು ಮಂಡಳಿಗಳ ಮೂಲಕ ನ್ಯಾಯ ಒದಗಿಸುವುದು, ಅಂತಹ ಮಹಿಳೆಯರನ್ನು ಒಳಗೊಂಡಂತಹ ಸಂಘಟಿತ ಹೋರಾಟದ ಮೂಲಕ ನ್ಯಾಯ ಒದಗಿಸುವುದು. ವರದಕ್ಷಿಣೆ ದೌರ್ಜನ್ಯ, ಗಂಡಂದಿರ ಕಿರುಕುಳದಂತಹ ಅನೇಕ ಪ್ರಕರಣಗಳಲ್ಲಿ ಈ ಸಂಘಟನೆ ಪ್ರಕರಣ ನಡೆದ ಮನೆಯ ಸುತ್ತಮುತ್ತಲ ಪ್ರದೇಶಗಳಲ್ಲಿ ಜನಾಭಿಪ್ರಾಯ ರೂಪಿಸುವ ಚಳುವಳಿ ನಡೆಸುವುದು, ಮಹಿಳೆಯರ ದಿನನಿತ್ಯದ ಬದುಕನ್ನು ಉತ್ತಮ ಗೊಳಿಸಲು ಅಗತ್ಯವಾದ ಕುಡಿಯುವ ನೀರು, ಶೌಚಾಲಯ, ಪಡಿತರ ವ್ಯವಸ್ಥೆ, ಆರೋಗ್ಯ ಸಂಬಂಧಿ ಸೌಲಭ್ಯಗಳು ಇತ್ಯಾದಿ ಮೂಲಭೂತ ಸೌಲಭ್ಯಗಳ ಸಲುವಾಗಿ ಆಯಾ ಪ್ರದೇಶದ ಮಹಿಳೆಯರನ್ನು ಸಂಘಟಿಸುವುದು, ಕೃಷಿ ಪ್ರಧಾನ ಪ್ರದೇಶಗಳಲ್ಲಿ ಮಹಿಳಾ ಕಾರ್ಮಿಕರಿಗೆ ಪುರಷರೊಂದಿಗೆ ಸಮಾನ ವೇತನ ದೊರಕಿಸಿಕೊಡುವುದು, ಭೂಮಿಯ ಮೇಲಿನ ಹಕ್ಕನ್ನು ದೊರಕಿಸಿ ಕೊಡುವುದು ಹಾಗೂ ಜಂಟಿ ಪಟ್ಟಾಗಳನ್ನು ಕೊಡಿಸು ವುದು ಜನವಾದಿ ಮಹಿಳಾ ಸಂಘಟನೆ ನಡೆಸುವ ಚಟುವಟಿಕೆಗಳು.



ಜಾತಿ ಪದ್ಧತಿಯ ನಿರ್ಮೂಲನಕ್ಕಾಗಿ ಕೆಲಸ ಮಾಡುವುದು ತನ್ನ ಪ್ರಥಮ ಆದ್ಯತೆಗಳಲ್ಲೊಂದು ಎನ್ನುವ ಈ ಸಂಘಟನೆ ಮೇಲ್ಜಾತಿಯವರ ದೌರ್ಜನ್ಯಗಳ ವಿರುದ್ಧ ದಲಿತ ಮಹಿಳೆಯರನ್ನು ಸಂಘಟಿಸುವುದರಲ್ಲಿ ಕ್ರಿಯಾಶೀಲವಾಗಿದೆ. ಜೊತೆಗೇ, ದಲಿತ ಮಹಿಳೆಯರ ಬೆಂಬಲಕ್ಕೆ ಇತರೆ ವರ್ಗಗಳ ಮಹಿಳೆಯರನ್ನು ಸಂಘಟಿಸುವುದರಲ್ಲೂ ಯಶಸ್ವಿಯಾಗಿದೆ. ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ನೂರಾರು ಹಳ್ಳಿಗಳಲ್ಲಿ ದಲಿತರು ಹಾಗೂ ಸವರ್ಣೀಯರು ಒಂದೇ ಬಾವಿಯಿಂದ ನೀರು ತೆಗೆಯುವಂತಹ ಕ್ರಾಂತಿಕಾರಿ ಬದಲಾವಣೆಗೆ ಈ ಸಂಘಟನೆ ನಾಂದಿ ಹಾಡಿದೆ.

ಸಂಶೋಧನಾ ಕೇಂದ್ರ:

"ಭಾರತೀಯ ಮಹಿಳಾ ಅಧ್ಯಯನ ಮತ್ತು ಅಭಿವೃದ್ಧಿ ಸಂಸ್ಥೆ" - ಈ ಸಂಘಟನೆಯ ಒಂದು ಅಂಗ ಸಂಸ್ಥೆ. ಈ ಸಂಸ್ಥೆಯು ಸಮಾಜದಲ್ಲಿ ಮಹಿಳೆಯರ ಪಾತ್ರ ಕುರಿತಂತೆ, ಮಹಿಳೆಯರ ಬದುಕನ್ನು ನಿಯಂತ್ರಿಸುವ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಬಗ್ಗೆ ಹಾಗೂ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆಯ ಬಗ್ಗೆ ವಿಶ್ಲೇಷಣೆ ನಡೆಸುತ್ತಿದೆ. ಮಹಿಳಾ ಅಧ್ಯಯನ ಹಾಗೂ ಮಹಿಳಾ ಚಳುವಳಿಯ ನಡುವೆ ನೇರ ಸಂಬಂಧ ಕಲ್ಪಿಸಲು ಈ ಕೇಂದ್ರ ಶ್ರಮಿಸುತ್ತಿದೆ.

ಸಂಘಟನೆಯು ತನ್ನ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಹಾಗೂ ಜನಸಮುದಾಯದಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಹೆಚ್ಚಿನ ಅರಿವು ಉಂಟುಮಾಡುವ ಉದ್ದೇಶಕ್ಕಾಗಿ ಇಂಗ್ಲೀಷಿನಲ್ಲಿ 'ವುಮೆನ್ಸ್ ಈಕ್ವಾಲಿಟಿ' ಹಾಗೂ ಹಿಂದಿಯಲ್ಲಿ 'ಸಾಮ್ಯ' ಎಂಬ ಪತ್ರಿಕೆಗಳನ್ನೂ ಪ್ರಕಟಿಸುತ್ತಿದೆ.

ನಿಮಗಿದು ತಿಳಿದಿರಲಿ

ಸ್ವಾತಂತ್ರ್ಯ ಹೋರಾಟದಲ್ಲಿ ವ್ಯಕ್ತಗೊಂಡ ಪ್ರಜಾಪ್ರಭುತ್ವವಾದಿ ಆಶಯಗಳಿಂದಾಗಿ ಸ್ವಾತಂತ್ರ್ಯಾನಂತರ ರೂಪುಗೊಂಡ ಭಾರತ ಗಣತಂತ್ರದ ಸಂವಿಧಾನ ಮಹಿಳೆಯರ ಹಕ್ಕುಗಳಿಗೆ ಸಂಬಂಧಪಟ್ಟಂತೆ ಕೆಲವು ಭರವಸೆಗಳನ್ನು ನೀಡಿದೆ. ಇವನ್ನು ರಕ್ಷಿಸಲು, ಜಾರಿಗೆ ತರಲು ಹಲವು ಶಾಸನಗಳನ್ನು ತರಲಾಗಿದೆ. ಇವು ಎಷ್ಟರ ಮಟ್ಟಿಗೆ ನಿಜವಾಗಿ ಕಾರ್ಯರೂಪಕ್ಕಿಳಿದಿವೆ ಎಂಬುದು ಬೇರೆ ಮಾತು. ಆದರೆ ಪ್ರಜಾಪ್ರಭುತ್ವವಾದೀ ಆಂದೋಲನದ ಹೋರಾಟಗಳ ಫಲವಾಗಿ ಮೂಡಿಬಂದ ಈ ಕಾನೂನುಗಳು, ಹಕ್ಕುಗಳು ಯಾವುದೇ ಪ್ರಜಾಪ್ರಭುತ್ವವಾದೀ ಸಂಘಟನೆಗೆ ಹೋರಾಟದ ಸಾಧನಗಳಲ್ಲಿ ಒಂದಾಗುವುದು ಸಾಧ್ಯವಿದೆ. ಇಂತಹ ಕೆಲವು ಹಕ್ಕುಗಳು ಹಾಗೂ ಕಾನೂನುಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

ಸಂವಿಧಾನದಲ್ಲಿ

14ನೇ ಕಲಮು: ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವಲಯಗಳಲ್ಲಿ ಪುರುಷ ಮತ್ತು ಮಹಿಳೆಯರಿಗೆ ಸಮಾನ ಹಕ್ಕು ಹಾಗೂ ಅವಕಾಶಗಳನ್ನು ನೀಡುತ್ತದೆ.

15ನೇ ಕಲಮು: ಧರ್ಮ, ಜನಾಂಗ, ಜಾತಿ, ಲಿಂಗದ ಆಧಾರದಲ್ಲಿ 'ಪಕ್ಷಪಾತ ಮಾಡುವುದನ್ನು ನಿಷೇಧಿಸುತ್ತದೆ. ಮಹಿಳೆಯರ ಘನತೆಗೆ ಕುಂದುತರುವ ಆಚರಣೆಗಳನ್ನು ಬಿಡಬೇಕು ಎಂದು ವಾದಿಸುತ್ತದೆ.

16ನೇ ಕಲಮು: ಸಾರ್ವಜನಿಕ ನೇಮಕಾತಿಗಳಲ್ಲಿ ಎಲ್ಲಾ ನಾಗರೀಕರಿಗೂ ಸಮಾನ ಅವಕಾಶದ ಭರವಸೆ ನೀಡುತ್ತದೆ.

ಕಲಮು 39(a) ಪುರುಷರಿಗೂ, ಮಹಿಳೆಯರಿಗೂ ಜೀವನ ಸಾಧನದ ಹಕ್ಕನ್ನು ಸಮಾನವಾಗಿ ಕೊಡುವಂತೆ ಸರಕಾರ ತನ್ನ ಧೋರಣೆಗಳನ್ನು ನಿರ್ದೇಶಿಸಬೇಕು ಎಂದು ಹೇಳಿದೆ.

ಕಲಮು 39(c) ಸಮಾನ ಕೆಲಸಕ್ಕೆ ಸಮಾನ ವೇತನದ ಹಕ್ಕು ನೀಡುತ್ತದೆ.

ಕಲಮು 42: ನ್ಯಾಯಪೂರ್ಣ ಹಾಗೂ ಮಾನವೀಯ ಕೆಲಸದ ಪರಿಸ್ಥಿತಿಗಳನ್ನು ಒದಗಿಸುವಂತೆ ಹಾಗೂ ಮಾತೃತ್ವ ಪರಿಹಾರ ನೀಡುವಂತೆ ವ್ಯವಸ್ಥೆ ಮಾಡಬೇಕೆಂದು ಸರಕಾರಕ್ಕೆ ನಿರ್ದೇಶನ ನೀಡುತ್ತದೆ.

ಕಾನೂನುಗಳು

ಸಮಾನ ಪ್ರತಿಫಲ ಕಾನೂನು, 1976 - ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ವೇತನ ನೀಡುವಂತೆ ವಿಧಿಸುತ್ತದೆ.

ಹಿಂದೂ ವಿವಾಹ ಕಾನೂನು, 1955 - 1976 ರಲ್ಲಿ ತಿದ್ದುಪಡಿ. ಪ್ರೌಢಳಾಗುವ ಮೊದಲು ವಿವಾಹ ಮಾಡಿಸಿದ್ದರೆ ಅದನ್ನು ತಿರಸ್ಕರಿಸುವ ಹಕ್ಕನ್ನು ಆ ಬಾಲಕಿಗೆ ಈ ಕಾನೂನು ಒದಗಿಸಿದೆ.

ಅನೈತಿಕ ಸಾಗಾಣಿಕೆ ಕಾನೂನು, 1956 (1986 ರಲ್ಲಿ ತಿದ್ದುಪಡಿ ಮಾಡಿ ಈ ಹೊಸ ಹೆಸರು ಕೊಡಲಾಯಿತು) ಮಹಿಳೆ ಅಥವಾ ಪುರುಷನ ಲೈಂಗಿಕ ಶೋಷಣೆಯನ್ನು ದಂಡನೀಯ ಅಪರಾಧವೆಂದು ಪರಿಗಣಿಸುತ್ತದೆ.

ವರದಕ್ಷಿಣೆ ನಿಷೇಧ ಕಾನೂನು, 1961 -ಮಹಿಳೆಯರನ್ನು ಕ್ರೌರ್ಯಕ್ಕೆ ಒಳಪಡಿಸುವುದನ್ನು ದಂಡನೀಯ ಅಪರಾಧವಾಗಿ ಮಾಡಿದೆ. 1986 ರಲ್ಲಿ ತಂದ ತಿದ್ದುಪಡಿ, ವಿವಾಹವಾಗಿ 7 ವರ್ಷಗಳೊಳಗೆ ಒಬ್ಬ ಮಹಿಳೆ ಆತ್ಮಹತ್ಯೆ ಮಾಡಿಕೊಂಡರೆ, ಆಕೆ ಕ್ರೌರ್ಯಕ್ಕೆ ಒಳಗಾಗಿದ್ದಳು ಎಂದು ಸಾಬೀತಾದರೆ ಗಂಡ ಮತ್ತು ಆತನ ಸಂಬಂಧಿಗಳು ಶಿಕ್ಷಾರ್ಹರಾಗುತ್ತಾರೆ. ಭಾರತೀಯ ದಂಡಸಂಹಿತೆ (IPC)ಯಲ್ಲೂ ವರದಕ್ಷಿಣೆ ಸಾವು' ಎಂಬ ಕ್ರಿಮಿನಲ್ ಅಪರಾಧವನ್ನು ಸೇರಿಸಲಾಗಿದೆ.

ಬಾಲವಿವಾಹ ತಡೆ ಕಾನೂನು, 1976 - ಬಾಲಕಿಯ ವಿವಾಹ ವಯಸ್ಸನ್ನು 18 ವರ್ಷಕ್ಕೆ, ಬಾಲಕನ ವಿವಾಹ ವಯಸ್ಸನ್ನು 21 ಕ್ಕೆ ಏರಿಸಿತು. ಈ ಕಾನೂನಿನ ಪ್ರಕಾರ ಅಪರಾಧ ಶಿಕ್ಷಾರ್ಹವಾಗುತ್ತದೆ.

ಕಾರ್ಖಾನೆಗಳ ಕಾನೂನು, 1948 - ಕ್ಯಾಶುವಲ್ ಮತ್ತು ಕಾಂಟ್ರಾಕ್ಟ್ ಕಾರ್ಮಿಕರೂ ಸೇರಿ ಮಹಿಳಾ ಕಾರ್ಮಿಕರ ಒಟ್ಟು ಸಂಖ್ಯೆ 30 ಇದ್ದಲ್ಲಿ ಶಿಶುಪಾಲನಾ ವ್ಯವಸ್ಥೆಯನ್ನು ಒದಗಿಸಬೇಕು ಎಂದು ವಿಧಿಸುತ್ತದೆ.

ವೈದ್ಯಕೀಯ ಗರ್ಭಪಾತ ಕಾನೂನು, 1971 ಮಾನವೀಯ ಮತ್ತು ವೈದ್ಯಕೀಯ ಆಧಾರದಲ್ಲಿ ಅರ್ಹ ಪರಿಣಿತರಿಂದ ಗರ್ಭಪಾತವನ್ನು ಕಾನೂನುಬದ್ಧಗೊಳಿಸುತ್ತದೆ.

ಕ್ರಿಮಿನಲ್ ಕಾನೂನು, 1983 ಕ್ಕೆ ತಂದ ತಿದ್ದುಪಡಿಗಳು ಸಾಮಾನ್ಯ ಅತ್ಯಾಚಾರ ಪ್ರಕರಣಗಳಲ್ಲಿ 10 ವರ್ಷದ ಶಿಕ್ಷೆ ವಿಧಿಸುತ್ತದೆ. ಗರಿಷ್ಠ ಶಿಕ್ಷೆ ಅಜೀವನ ಜೈಲು ಶಿಕ್ಷೆಯವರೆಗೂ ಹೋಗಬಹುದು.

ಮಹಿಳೆಯರನ್ನು ಘನತೆಹೀನವಾಗಿ ಬಿಂಬಿಸುವ ನಿಷೇಧ ಕಾನೂನು, 1986 ಹಾಗೂ ಸತಿ (ನಿಷೇಧ) ಕಾನೂನು, 1987 - ಮಹಿಳೆಯರ ಘನತೆಯನ್ನು ರಕ್ಷಿಸುವ, ಅವರ ವಿರುದ್ಧ ಹಿಂಸಾಚಾರ ಹಾಗೂ ಶೋಷಣೆ ತಪ್ಪಿಸುವ ಉದ್ದೇಶ ಹೊಂದಿದೆ.

ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿಯ ಮಸೂದೆ ಅಂಗೀಕಾರದಲ್ಲಿ ಇನ್ನು ವಿಳಂಬ ಖಂಡಿತಾ ಸಲ್ಲದು”

ಸಂಸತ್ತಿನಲ್ಲಿ ಬಹಳ ಸಮಯದಿಂದ ನೆನೆಗುದಿಗೆ ಬಿದ್ದಿರುವ ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿಯ ಮಸೂದೆಯನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲಿ ಯಾವುದೇ ರೀತಿಯಲ್ಲಿ ವ್ಯತ್ಯಯಗೊಳಿಸದೆ, ದುರ್ಬಲಗೊಳಿಸದೆ ಮತದಾನಕ್ಕೆ ಸದನದಲ್ಲಿ ಮಂಡಿಸಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 5ನೇ ರಾಷ್ಟ್ರ ಸಮ್ಮೇಳನ ಬಲವಾಗಿ ಒತ್ತಾಯಿಸಿದೆ. ಈ ಬಗ್ಗೆ ಇತ್ತೀಚಿನ ಚುನಾವಣೆಗಳಲ್ಲೂ ರಾಜಕೀಯ ಪಕ್ಷಗಳು ತಾವು ನೀಡಿದ ಆಶ್ವಾಸನೆಗಳನ್ನು ಈಡೇರಿಸಬೇಕು ಎಂದು ಅದು ನೆನಪಿಸಿದೆ.

ಮಹಿಳೆಯರನ್ನು ಚುನಾಯಿಸಬೇಕಾದ ಕ್ಷೇತ್ರಗಳನ್ನು ದ್ವಿಸದಸ್ಯ ಕ್ಷೇತ್ರಗಳಾಗಿ, ಉಳಿದವುಗಳನ್ನು ಈಗಿನಂತೆ ಏಕಸದಸ್ಯ ಕ್ಷೇತ್ರಗಳಾಗಿ ಮಾಡಬೇಕೆಂಬ ಒಂದು ಪ್ರಸ್ತಾಪವಿದೆ. ಇದು ಈ ಮಸೂದೆಯನ್ನು ದುರ್ಬಲಗೊಳಿಸುವ, ಮಹಿಳೆಯರ ಪುರುಷರ ನೆರವಿನಿಂದಲಷ್ಟೇ ಜನಗಳನ್ನು ಪ್ರತಿನಿಧಿಸಲು ಸಾಧ್ಯ ಎಂಬ ಪಿತೃಪ್ರಧಾನ ಮೌಲ್ಯಗಳನ್ನು ಗಟ್ಟಿಗೊಳಿಸುವ ಪ್ರಯತ್ನ ಎಂದು ಸಮ್ಮೇಳನ ಇದನ್ನು ವಿರೋಧಿಸಿದೆ. ಎಲ್ಲಾ ಚುನಾಯಿತ ಕ್ಷೇತ್ರಗಳನ್ನು ದ್ವಿಸದಸ್ಯ ಕ್ಷೇತ್ರಗಳಾಗಿಸುವ ಪ್ರಸ್ತಾಪ ಬೇಕೆಂದೇ ಈ ಮಸೂದೆ ಕಾನೂನಾಗುವುದನ್ನು ವಿಳಂಬಗೊಳಿಸುವ ಮತ್ತೊಂದು ತಂತ್ರ, ಏಕೆಂದರೆ ಇದಕ್ಕೆ ಇಡೀ ಚುನಾವಣಾ ವ್ಯವಸ್ಥೆಯನ್ನು ಬದಲಿಸಬೇಕಾಗುತ್ತದೆ, ಚುನಾವಣಾ ಕ್ಷೇತ್ರಗಳ ಮರು ವಿಂಗಡಣೆ, ಮಾಹಿತಿಗಳ ಸಂಗ್ರಹ ಇತ್ಯಾದಿಗಳಿಗೆಲ್ಲ ಬಹಳ ಸಮಯ ಬೇಕಾಗುತ್ತದೆ ಎಂದು ನಿರ್ಣಯ ಹೇಳಿದೆ.

33% ವನ್ನು ಯಾವುದೇ ಕಾರಣಕ್ಕೆ ಕಮ್ಮಿ ಮಾಡುವ ಪ್ರಸ್ತಾಪವನ್ನು ಮಹಿಳೆಯು ಸ್ವೀಕರಿಸುವುದಿಲ್ಲ. ಏಕೆಂದರೆ ಸಮಾಜದಲ್ಲಿ 50% ಇರುವ ಮಹಿಳೆಯರು 33% ಮೀಸಲಾತಿ ಕೇಳುವುದಕ್ಕೆ ಹಕ್ಕಿದೆ, ಅದು ಅವರಿಗೆ ಕೊಡುವ ದಾನವಲ್ಲ. ಮತ್ತು ಎಲ್ಲೆಲ್ಲಿ ತಮಗೆ ಅವಕಾಶ ದೊರೆತಿದೆಯೋ ಅಲ್ಲೆಲ್ಲಾ ಪುರುಷರನ್ನು ಮೀರಿಸದಿದ್ದೂ ಸರಿಸಾಟಿಯಾಗಿ ಮಹಿಳೆಯು ಕಾರ್ಯನಿರ್ವಹಿಸಿದ್ದಾರೆ. ಪಂಚಾಯತೀ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರ ಇದಕ್ಕೊಂದು ಸಾಕ್ಷಿ ಎಂದಿರುವ ನಿರ್ಣಯ ಈ ಮೀಸಲಾತಿ ಪ್ರಜಾಪ್ರಭುತ್ವವನ್ನು ಬಲಗೊಳಿಸುವತ್ತ ಒಂದು ಹೆಜ್ಜೆ ಎಂದಿದೆ.

ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಗೆ ಸಂಬಂಧ ಪಟ್ಟಂತೆ ಹೇಳುವುದಾದರೆ ತಮ್ಮ ಸಂಘಟನೆ ಸದಾ ಈ ವಿಭಾಗಗಳ, ದಲಿತ ವಿಭಾಗಗಳ ಬೆಂಬಲಕ್ಕೆ ನಿಂತ ಸಂಘಟನೆ, ಈ ಕಾರಣಕ್ಕಾಗಿಯೇ ಅದು ಮಂಡಲ್ ಆಯೋಗದ ಶಿಫಾರಸುಗಳನ್ನು ಬೆಂಬಲಿಸಿತ್ತು. ಆದರೆ ರಾಜಕೀಯ ರಂಗದಲ್ಲಿ ಈಗ ಮೀಸಲಾತಿಯಿರುವುದು ಪರಿಶಿಷ್ಟಜಾತಿ ಮತ್ತು ವರ್ಗಗಳಿಗೆ ಮಾತ್ರ. ಓಬಿಸಿ ಗಳಿಗೆ ಮೀಸಲಾತಿ ಕೇಳದೆ ಕೇವಲ ಮಹಿಳೆಯರ ಮೀಸಲಾತಿಯಲ್ಲಿ ಮಾತ್ರ ಒಬಿಸಿಗೆ ಮೀಸಲಾತಿ ಕೇಳುವುದು. ಈ ಮಸೂದೆಯನ್ನು ಮೂಲೆಗೊತ್ತುವ ತಂತ್ರವಲ್ಲದೆ ಬೇರೇನೂ ಅಲ್ಲ ಎಂದು ನಿರ್ಣಯ ಹೇಳಿದೆ.

ಎಲ್ಲಾ ರಾಜಕೀಯ ಪಕ್ಷಗಳು ತಾವು ಭಾರತದ ಮಹಿಳೆಯರಿಗೆ ನೀಡಿದ ವಚನವನ್ನು ಈಡೇರಿಸಬೇಕು. ಎಲ್ಲಾ ಸದಸ್ಯರು ಈ ಮಸೂದೆಗೆ ಮತ ನೀಡುವಂತೆ ವ್ಹಿಪ್ ಹೊರಡಿಸಬೇಕು. ಇದನ್ನು ಉಲ್ಲಂಘಿಸುವವರನ್ನು ರಾಜೀನಾಮೆ ಕೊಡಲು ಕೇಳುವುದಾಗಿ ಬಹಿರಂಗವಾಗಿ ಸಾರಬೇಕು ಎಂದು ಸಮ್ಮೇಳನ ಆಗ್ರಹಪಡಿಸಿದೆ.



ಬೆಂಗಳೂರು

ಜೂನ್ 11-14, 1998

ಕೆಲವು ಪ್ರಮುಖ ನಿರ್ಣಯಗಳು

ಯುದ್ಧೋನ್ಮಾದಕ್ಕೆ ಸದಾ ಮಹಿಳೆಯರೇ ಮೊದಲ ಬಲಿ

ಪರಮಾಣು ವಿಸ್ಫೋಟಕ್ಕೆ ಮಹಿಳಾ ಸಮ್ಮೇಳನ ಖಂಡನೆ.

ಬಿಜೆಪಿ ಸರಕಾರ ಮತ್ತು ಸಂಘಪರಿವಾರ ಎಬ್ಬಿಸಿರುವ ಯುದ್ಧೋನ್ಮಾದದ ವಿರುದ್ಧ ಹಾಗೂ ಬಾಂಬಿನ, ಗಡಿಗಳನ್ನು ರಕ್ಷಿಸುವ ನೆಪದಲ್ಲಿ ಬಡ ಜನಗಳ ಮೇಲೆ ಹಾಕಿರುವ ಹೊರೆಗಳ ವಿರುದ್ಧ ಸಕ್ರಿಯವಾಗಿ ಪ್ರಚಾರ-ಪ್ರಕ್ಷೋಭೆ ನಡೆಸಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ 5ನೇ ರಾಷ್ಟ್ರೀಯ ಸಮ್ಮೇಳನ ಕರೆ ನೀಡಿದೆ.

ಸರಕಾರದ ಪರಮಾಣು ಧೋರಣೆಯನ್ನು ಕುರಿತಂತೆ ಕೈಗೊಂಡ ಸಮ್ಮೇಳನದ ಒಂದು ನಿರ್ಣಯ ಪರಮಾಣು ವಿಸ್ಫೋಟಗಳನ್ನು ಬಲವಾಗಿ ಖಂಡಿಸುತ್ತಾ ಅಲ್ಪಮತದ ಸರಕಾರದ ಈ ನೀತಿ 1974 ರಿಂದ ಭಾರತದ ವಿವಿಧ ಸರಕಾರಗಳು ಅನುಸರಿಸಿದ ಸರಿಯಾದ ನೀತಿಗೆ ವ್ಯತಿರಿಕ್ತವಾಗಿದೆ ಎಂದಿದೆ.

ಹಿಂದುತ್ವ ಅಜೆಂಡಾ ಹಾಗೂ ಪರಮಾಣು ಅಜೆಂಡಾದ ನಡುವಿನ ನಂಟು ಈಗ ಬಟಾ ಬಯಲಾಗಿದೆ ಎಂದಿರುವ ನಿರ್ಣಯ ವಿಹೆಚ್‌ಪಿ ಪರಮಾಣು ವಿಸ್ಫೋಟ ನಡೆಸಿದಲ್ಲಿ ಒಂದು ದೇವಸ್ಥಾನ ಕಟ್ಟುವುದಾಗಿ ಸಾರಿರುವುದು ಇದಕ್ಕೆ ಸಾಕ್ಷಿ ಎಂದಿದೆ. ಭಾರತದ ಅಣು ಪರೀಕ್ಷಣೆಯ ನಂತರ ಸರಕಾರೀ ನಾಯಕರ ಬೇಜವಾಬ್ದಾರಿ ಹೇಳಿಕೆಗಳು ಹಾಗೂ ಪಾಕಿಸ್ತಾನದ ಖಂಡನೀಯ ಪ್ರತಿಕ್ರಿಯೆ ಎರಡೂ ದೇಶಗಳನ್ನು ಪರಮಾಣೀಕರಣದ ಅಪಾಯಕಾರೀ ಸುಳಿಯಲ್ಲಿ ಸಿಲುಕಿಸಿದೆ. ಇದು ಎರಡೂ ದೇಶಗಳ ಹಾಗೂ ಇಲ್ಲಿಯ ಜನಗಳ ಹಿತಾಸಕ್ತಿಗಳಿಗೆ ಕೇಡು ತರುವಂತದ್ದು ಎಂದು ನಿರ್ಣಯ ಅಭಿಪ್ರಾಯ ಪಟ್ಟಿದೆ. ಸಾವಿರಾರು ಬಾಂಬ್, ಅಸ್ತ್ರಗಳನ್ನು ತುಂಬಿಟ್ಟುಕೊಂಡ ಪರಮಾಣು ಶಸ್ತ್ರಾಸ್ತ್ರ ದೇಶಗಳು ಅಣುಬಾಂಬನ್ನು ವಿಧ್ವಂಸಕ ರೀತಿಯಲ್ಲಿ ಬಳಸುವ ಏಕೈಕ ದೇಶವೆಂಬ ಕುಖ್ಯಾತಿಯ ಅಮೆರಿಕದ ನೇತೃತ್ವದಲ್ಲಿ ಈಗ ಬೂಟಾಟಿಕೆ ಪ್ರದರ್ಶಿಸುತ್ತಿರುವುದನ್ನು ನಿರ್ಣಯ ಬಲವಾಗಿ ಖಂಡಿಸಿದೆ.

ಎಲ್ಲೆಡೆಯೂ ಯುದ್ಧ ನಡೆದಾಗ, ಯುದ್ಧದ ಪರಿಸ್ಥಿತಿ ಉಂಟಾದಾಗ ಅದಕ್ಕೆ ಮೊದಲ ಬಲಿಯೆಂದರೆ ಮಹಿಳೆಯರೇ ಎಂದು ನೆನಪಿಸಿರುವ 5ನೇ ರಾಷ್ಟ್ರ ಸಮ್ಮೇಳನದ ನಿರ್ಣಯ ಶಾಂತಿ ಹಾಗೂ ನಿಶ್ಶಸ್ತ್ರೀಕರಣಕ್ಕಾಗಿ, ಪರಮಾಣು ಶಸ್ತ್ರಾಸ್ತ್ರಗಳು ಹಾಗೂ ಪರಮಾಣು ಬ್ಲಾಕ್‌ಮೇಲ್‌ಗಳಿಂದ ಮುಕ್ತವಾದ ಒಂದು ಜಗತ್ತಿಗಾಗಿ ಹೋರಾಡಲು ತಾನು ಬದ್ಧ ಎಂದು ಪುನರುಚ್ಚರಿಸಿದೆ. 'ಸಮಾಜ ಅತೀ ಬಡ ಹಾಗೂ ದುರ್ಬಲ ವಿಭಾಗವಾದ ಮಹಿಳೆಯರ ಪ್ರತಿನಿಧಿಗಳಾದ ನಮಗೆ ದಿಗ್ಬಂಧನಗಳಿಂದ ತಪ್ಪಿಸಿಕೊಳ್ಳುವ ಹೆಸರಲ್ಲಿ ಬಹುರಾಷ್ಟ್ರೀಯ ಕಂಪನಿಗಳನ್ನು ಸಂಪ್ರೀತಗೊಳಿಸುವ ಮೂಲಕ ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಿಟ್ಟುಕೊಡುವ ವಾಜಪೇಯಿ ಸರಕಾರದ ಪ್ರಯತ್ನ ಅಡೆತಡೆಯಿಲ್ಲದೆ ಮುಂದುವರೆಯಬಹುದು. ಹೊರಗಿನ ಬೆದರಿಕೆಗಳು ಹಾಗೂ ಬ್ಲಾಕ್‌ಮೇಲ್‌ಗಳನ್ನು ಎದುರಿಸಲು ಹೊಟ್ಟೆಕಟ್ಟಬೇಕು ಎಂಬ ಹೆಸರಲ್ಲಿ ಜನಸಾಮಾನ್ಯರ ಮೇಲೆ, ಅವರ ಜೀವನ ಮಟ್ಟದ ಮೇಲೆ ಇನ್ನಷ್ಟು ಧಾಳಿಗಳು ಬರಬಹುದು ಎಂಬ ಭೀತಿ ಇದೆ" ಎಂದು ಈ ನಿರ್ಣಯ ಹೇಳಿದೆ.

'ಸ್ವದೇಶಿ' ಯೆಂದರೆ ಬಡವರಿಗೆ ಹೊರೆ, ಸಿರಿವಂತರಿಗೆ ರಿಯಾಯ್ತಿಗಳೆಂದರ್ಥವೇ?

ಬಿಜೆಪಿ ಬಜೆಟ್ ವಿರುದ್ಧ ಸಮರಧೀರ ಹೋರಾಟಕ್ಕೆ ಸಿದ್ಧರಾಗಲು ಮಹಿಳೆಯರಿಗೆ ಕರೆ

ಬಿಜೆಪಿ ನೇತೃತ್ವದ ಸರಕಾರ ಬಜೆಟ್, ಅದರ ಮೊದಲು ಪ್ರಯಾಣ ದರ ಏರಿಸಿದ ರೈಲ್ವೇ ಬಜೆಟ್ ಬಹುಪಾಲು ಜನರ, ಅದರಲ್ಲೂ ಮಹಿಳೆಯರ ಜೀವನವನ್ನು ಇನ್ನಷ್ಟು ದುರ್ಭರಗೊಳಿಸಿದೆ ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 5ನೇ ರಾಷ್ಟ್ರೀಯ ಸಮ್ಮೇಳನ ಇದರ ವಿರುದ್ಧ ಸಕ್ರಿಯ ಪ್ರಚಾರ-ಪ್ರಕ್ಷೋಭೆ ನಡೆಸಬೇಕು, ಇದರ ದುಷ್ಪರಿಣಾಮಗಳ ವಿರುದ್ಧ ಸಮರಶೀಲ ಹೋರಾಟಕ್ಕೆ ಸಿದ್ಧರಾಗಿರಬೇಕು ಎಂದು ಕರೆ ನೀಡಿದೆ.

ಮಹಿಳೆಯರು ನೇಕಾರರು, ಬೀಡಿ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಅಂಚಿನಲ್ಲಿರುವ ರೈತರು, 35% ಬಡ ಗ್ರಾಮೀಣ ಕುಟುಂಬಗಳ ಮುಖ್ಯಸ್ಥರೂ ಆಗಿದ್ದಾರೆ ಎಂಬ ಅಂಶ ಬಹುಶಃ ಹಣಕಾಸು ಮಂತ್ರಿಗಳ ಗಮನಕ್ಕೆ ಬಂದಿಲ್ಲ. ಆದ್ದ ರಿಂದಲೇ ಈ ದೇಶದಲ್ಲಿ ಅತ್ಯಂತ ಸಂಕಷ್ಟಕ್ಕೊಳಗಾಗಿರುವ ಈ ವಿಭಾಗಗಳಿಗೆ ಪರಿಹಾರ ಕೊಡುವ ಆಶಯ ಕೂಡಾ ಈ ಬಜೆಟ್ಟಿನಲ್ಲಿಲ್ಲ ಎಂದು ಸಮ್ಮೇಳನ ಟೀಕಿಸಿದೆ. ಹೆಸರಿಗೆ ಮಾತ್ರ ಎರಡು ಯೋಜನೆಗಳನ್ನು ಒಟ್ಟು ಸೇರಿಸುವ ಬಗ್ಗೆ ಹೇಳಿದರು. ಆದರೆ ಇಲ್ಲಿಯೂ ಗೊಂದಲವೇ ಹೆಚ್ಚು. ಕಸ್ತೂರಿಬಾ ಗಾಂಧಿ ಶಿಕ್ಷಣ-ಯೋಜನೆ ಮತ್ತು ಮಹಿಳಾ ಸಮೃದ್ಧಿ ಯೋಜನೆಯನ್ನು ಒಟ್ಟು ಸೇರಿಸುವು ದಾಗಿ ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಇವುಗಳಲ್ಲಿ ಮೊದಲನೆಯದ್ದು ಶಿಕ್ಷಣಕ್ಕೆ ಸಂಬಂಧಪಟ್ಟಂತೆ, ಎರಡನೆಯದು ಬಡ ಮಹಿಳೆಯರಿಗೆ ಉಳಿತಾಯ ಯೋಜನೆ. ಮಹಿಳೆಯರ ಸಣ್ಣ ಉಳಿತಾಯಕ್ಕೆ ಬಹುಮಾನ ನೀಡಲೆಂದು ಇರುವ ಹಣವನ್ನು ಮಹಿಳಾ ಶಿಕ್ಷಣದ ಕಡೆಗೆ ತಿರುಗಿಸುವುದಾದರೆ ಇದು ಅತ್ಯಂತ ಆಕ್ಷೇಪಾರ್ಹ ಎಂದು ಎಐಡಿಡಬ್ಲ್ಯುಎ ಸಮ್ಮೇಳನದ ನಿರ್ಣಯ ಹೇಳಿದೆ.

ಇನ್ನೊಂದು ಅಪಾಯಕಾರಿ ಪ್ರಸ್ತಾವವೆಂದರೆ ಒಂದು ಸ್ವಯಂ ಸೇವಕ ಪಡೆಗೆ ಹಣ, ಎತ್ತಿಟ್ಟಿದ್ದು. ಇದು ಆರ್.ಎಸ್.ಎಸ್. ಮತ್ತು ಅದರ ಉಪ ಸಂಸ್ಥೆಗಳಿಗೆ ಸರಕಾರೀ ಹಣವನ್ನು ಒದಗಿಸುವ ಕ್ರಮವಲ್ಲದೆ ಬೇರೇನೂ ಅಲ್ಲ, ಇದು ದೇಶದ ಜನಜೀವನದಲ್ಲಿ ಮೂಲಭೂತ ವಾದಿ ಮತ್ತು ಪಿತೃಪ್ರಧಾನ ತತ್ವವನ್ನು ಗಟ್ಟಿಗೊಳಿಸಿ ಹರಡುತ್ತದೆ ಎಂದು ಈ ಅಖಿಲ ಭಾರತ ಸಮ್ಮೇಳನ ಆತಂಕ ವ್ಯಕ್ತಪಡಿಸಿದೆ.

ಸಾರ್ವಜನಿಕ ವಲಯದ ಶೇರು ವಿಕ್ರಯದ ಮೂಲಕ ಖಾಸಗೀಕರಣ, ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆಯುವುದು, ಭವಿಷ್ಯನಿಧಿಯಲ್ಲಿರುವ ಕಾರ್ಮಿಕ ವರ್ಗದ ಬೆವರಿನ ಹಣವನ್ನು ಖಾಸಗಿ ವಲಯಕ್ಕೆ ಒದಗಿಸುವುದು ಇವೆಲ್ಲಾ ಆಕ್ಷೇಪಾರ್ಹ ಪ್ರಸ್ತಾವಗಳು ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘದ 5ನೇ ರಾಷ್ಟ್ರೀಯ ಸಮ್ಮೇಳನ ಈ ಸಿರಿವಂತ ಪರ ಬಜೆಟ್ಟನ್ನು 'ಸ್ವದೇಶಿ' ಎನ್ನಲಾಗುತ್ತಿದೆ. ಬಹುಶಃ ಬಿಜೆಪಿಯ ಪ್ರಕಾರ ಸ್ವದೇಶಿಯೆಂದರೆ ಬಡವರ ಮೇಲೆ ಹೊರೆ, ಉದ್ಯಮಿಗಳಿಗೆ, ತೆರಿಗೆ ವಂಚಕರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ರಿಯಾಯ್ತಿ ಎಂದರ್ಥವಿರಬೇಕು ಎಂದು ಹೀಯಾಳಿಸಿದೆ.

ಕಲಾ ಕಾರ್ಯಾಗಾರ



ಪ್ರಧಾನ ಸಂಸ್ಕೃತಿಗಳಲ್ಲಿ ಕಂಡುಬರುವ ಲಿಂಗಾಧಾರಿತ ತಾರತಮ್ಯವು ಅಧೀನ ಸಂಸ್ಕೃತಿಗಳಲ್ಲಿ ಇಲ್ಲದಿರುವುದು ಸೋಜಿಗವಾದರೂ ಸಂತಸದ ವಿಷಯ ಎಂದು ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಸಿ. ಚಂದ್ರಶೇಖರ್ ಹೇಳಿದರು.


ಹಕ್ಕಿ ಪಿಕ್ಕಿ ಜನಾಂಗವನ್ನು ಇದಕ್ಕೆ ಉದಾಹರಣೆಯಾಗಿ ನೀಡಿದ ಅವರು ಅಲ್ಲ ಸ್ತ್ರೀ-ಪುರುಷರ ನಡುವಿನ ಸಮಾನತೆ ಎನ್ನುವುದು ಅವರ ದೈಹಿಕ ಚರ್ಚೆಗಳಲ್ಲಿ ಚಲನ ವಲನಗಳಲ್ಲಿ ಹಾಗೂ ಮನೋಭಾವದಲ್ಲಿ ತೀರ ಸಹಜವಾಗಿ ಬೆರೆತು ಹೋಗಿದೆ ಎಂದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ತನ್ನ 5 ನೇ ರಾಷ್ಟ್ರೀಯ ಸಮ್ಮೇಳನದ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಮಹಿಳೆ ಮತ್ತು ಹಿಂಸೆ ಕುರಿತು ಕಲಾ ಕಾರ್ಯಾಗಾರವನ್ನು ಮಹಾರಾಣಿ ವಿಜ್ಞಾನ ಕಾಲೇಜಿನ ಆವರಣದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ ಹಾಗೂ ಉದ್ಯೋಗದ ಭದ್ರತೆ ಇರುವ ವರ್ಗಗಳಲ್ಲೇ ಸ್ತ್ರೀಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸಿದರು.

ಸ್ವಂತಃ ಒಂದು ಪೋಸ್ಟರ್ ರಚಿಸುವ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿದ ಚಂದ್ರಶೇಖರ್ ಅವರು, ಸೃಷ್ಟಿಯ ಸಂಕೇತವಾಗಿ ಕೆಂಪು ಪಕಳೆಯ ಹೂಗಳನ್ನು, ಮಹಿಳೆಯ ಮೇಲಿನ ದೌರ್ಜನ್ಯದ ಸಂಕೇತವಾಗಿ ಹಳದಿ ಜ್ವಾಲೆಗಳನ್ನು, ಪುರುಷ ಸಂಕೇತವಾಗಿ ವರುಣನನ್ನು ಚಿತ್ರಿಸಿದರು.

ಜೀವನದಲ್ಲಿ ಶಾಂತಿ ಹಾಗೂ ಸಂತೋಷ ನೆಲೆಸುವಂತಾಗಲು ರಾಜಿ ಸೂತ್ರವನ್ನು ಪಾಲಿಸಬೇಕೆಂಬುದು ಚಂದ್ರಶೇಖರ್ ಅವರ ಅಭಿಪ್ರಾಯ. ನನ್ನ ಹೆಚ್ಚಿನ ಕಲಾಕೃತಿಗಳು ಅದೇ ಸಂದೇಶವನ್ನು ನೀಡುತ್ತವೆ ಎಂದರು.

ಕಾರ್ಯಾಗಾರದಲ್ಲಿ ನಗರದ ಸುಮಾರು 20 ಕಲಾವಿದರು ಭಾಗವಹಿಸಿ 40 ಕ್ಕೂ ಹೆಚ್ಚು ಚಿತ್ರಕೃತಿಗಳನ್ನು ರಚಿಸಿದರು. ಈ ಕೃತಿಗಳನ್ನು ಸಮ್ಮೇಳನದ ಸಂದರ್ಭದಲ್ಲಿ ಪುರಭವನದಲ್ಲಿ ಪ್ರದರ್ಶಿಸಲಾಯಿತು.



ವಿಚಾರ ಸಂಕಿರಣ

ನಮ್ಮ ದೇಶದಲ್ಲಿ ಚಾಲ್ತಿಯಲ್ಲಿರುವ ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳು ಅಸಮರ್ಪಕವಾಗಿದ್ದು, ತೀವ್ರ ತರವಾದ ಸುಧಾರಣೆಗಳು ಅತ್ಯಗತ್ಯವಾಗಿದೆ ಎಂದು ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಾಧೀಶ ಎಂ.ಜಿ ಸದಾಶಿವ ಹೇಳಿದ್ದಾರೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 5 ನೇ ರಾಷ್ಟ್ರೀಯ ಸಮ್ಮೇಳನದ ಅಂಗವಾಗಿ ನಗರದಲ್ಲಿ ಏರ್ಪಡಿಸಿದ್ದ ಮಹಿಳೆಯರ ಹಕ್ಕುಗಳು ಮತ್ತು ಕಾನೂನಿನಲ್ಲಿ ಸುಧಾರಣೆ ಕುರಿತ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಮಗುವಿನ ಪಾಲನೆ-ಪೋಷಣೆ ಮಾಡುವ ತಾಯಿ ನಿಜವಾದ ಪೋಷಕಳೇ ಹೊರತು ಕಾನೂನಿನಲ್ಲಿ ಇರುವ ಹಾಗೆ ಕೇವಲ ತಂದೆ ಮಗುವಿನ ಸಹಜ ಪೋಷಕನಲ್ಲ ಎಂದರು.

ದೇಶದ ಹಲವು ಕೆಳ ನ್ಯಾಯಾಲಯಗಳು ಮಹಿಳೆಯರ ದೌರ್ಜನ್ಯಗಳ ವಿಷಯದಲ್ಲಿ ನೀಡಿರುವ ತೀರ್ಪುಗಳು ಪ್ರಶ್ನಾರ್ಹವಾಗಿರುವುದು ನಿಜ ಎಂದ ನ್ಯಾಯಾಧೀಶರು, ಅಂತಹ ತೀರ್ಪುಗಳು ತಪ್ಪು ಕಲ್ಪನೆಗೆ ಅವಕಾಶ ನೀಡುತ್ತವೆಯಾದರೂ, ಇಡೀ ನ್ಯಾಯಾಂಗವೇ ಮಹಿಳೆಯರ ವಿಷಯದಲ್ಲಿ ನ್ಯಾಯ ಒದಗಿಸುತ್ತಿಲ್ಲ ಎಂಬುದು ಸರಿಯಲ್ಲ ಎಂದೂ ಅಭಿಪ್ರಾಯಪಟ್ಟರು.

ಮಹಿಳೆಯರ ಅನೇಕ ಸಮಸ್ಯೆಗಳಿಗೆ ಮೂಲಭೂತ ಕಾರಣವಾಗಿರುವ ಅನಕ್ಷರತೆ ಮತ್ತು ಅವಲಂಬನೆಗಳನ್ನು ತೊಡೆದು ಹಾಕಿ, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ದಾರಿ ಮಾಡಿ ಕೊಡಬೇಕು ಎಂದು ಕರೆ ನೀಡಿದ ಸದಾಶಿವ ಅವರು ಮಹಿಳೆಯರೂ ಕೂಡ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಕಾನೂನಿನ ಬಗ್ಗೆ ಸೂಕ್ತವಾದ ಅರಿವು ಬೆಳೆಸಿಕೊಳ್ಳಬೇಕು ಹಾಗೂ ಅದನ್ನು ದಕ್ಕಿಸಿಕೊಳ್ಳಲು ಹೋರಾಟದ ದನಿ ಎತ್ತಬೇಕು ಎಂದರು.

ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳಲ್ಲಿರುವ ಲೋಪಗಳನ್ನು ತಮ್ಮ ವೃತ್ತಿಯ ಅನುಭವದ ಆಧಾರದಲ್ಲಿ ಬಿಡಿಸಿಟ್ಟ ಹಿರಿಯ ನ್ಯಾಯವಾದಿ ಮತ್ತು ಲೇಖಕಿ ಹೇಮಲತಾ ಮಹಿಷಿ ಅವರು ವಿಚ್ಛೇದಿತ ಮಹಿಳೆಗೆ ನೀಡುವ ಜೀವನಾಂಶದ ಮೊತ್ತವನ್ನು ಹೆಚ್ಚಿಸಬೇಕು; ತಾತ್ಕಾಲಿಕ ಜೀವನಾಂಶ ಪಡೆಯಲು ಇರುವ ನೂರೆಂಟು ವಿಧಿವಿಧಾನಗಳನ್ನು ಸರಳೀಕರಿಸಬೇಕು; ಜೀವನಾಂಶವನ್ನು ಗಂಡನ ವೇತನದ ಮೂಲದಿಂದಲೇ ಕಡಿತಗೊಳಿಸುವ ವ್ಯವಸ್ಥೆ ರೂಪುಗೊಳ್ಳಬೇಕು' ಎಂದು ಸಲಹೆ ಮಾಡಿದರು.

ಸಾಮಾಜಿಕ ಭದ್ರತೆ ಮತ್ತು ಆಸ್ತಿಯ ಹಕ್ಕು ಕುರಿತು ಮಾತನಾಡಿದ, ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಸುಭಾಷಿಣಿ ಅಲಿ ಅವರು, ಆಸ್ತಿಯ ಹಕ್ಕುಗಳಿಗಾಗಿ ಮಹಿಳೆಯರು ನಡೆಸಿರುವ ಎಲ್ಲಾ ಹೋರಾಟಗಳಲ್ಲಿ ಧರ್ಮಾಂಧ ಶಕ್ತಿಗಳು ಹಾಗೂ ಮೂಲಭೂತವಾದಿಗಳು ಸದಾ ಅಡ್ಡಗಾಲು ಹಾಕುತ್ತವೆ ಎಂದು ನಿದರ್ಶನಗಳ ಸಹಿತ ವಿವರಿಸಿದರು. ಮಹಿಳೆಯರು ಆಸ್ತಿಗೆ ಕಾನೂನುಬದ್ಧ ಪಾಲುದಾರರಾಗಬೇಕು ಎಂದೂ ಆಗ್ರಹಪಡಿಸಿದರು.

ಜೈಪುರದಲ್ಲಿ ಯುವತಿಯೊಬ್ಬಳ ಮೇಲೆ ಎರಡು ಬಾರಿ ನಡೆದ್ದ ಸಾಮೂಹಿಕ ಅತ್ಯಾಚಾರ ಪ್ರಕರಣ ಹಾಗೂ ಆ ಪ್ರಕರಣದಲ್ಲಿ ಪೋಲೀಸ್ ಮತ್ತು ನ್ಯಾಯಾಂಗದ ಪಾತ್ರ ಕುರಿತು ಮಾತನಾಡಿದ ಜನವಾದಿ ಮಹಿಳಾ

⇨ ಪುಟ 8

ಲೋಕಸಂಚಾರ

ಶರತ್ ಚಂದ್ರ

ಭಾರತ-ಪಾಕಿಸ್ತಾನ ಅಣು ಸ್ಫೋಟಗಳು - ಭದ್ರತಾ ಸಮಿತಿ ಖಂಡನೆ

ಭಾರತ ಮತ್ತು ಪಾಕಿಸ್ತಾನಗಳು ಅಣ್ವಸ್ತ್ರ ಪರೀಕ್ಷಣಾ ಸ್ಫೋಟಗಳನ್ನು ನಡೆಸಿರುವುದನ್ನು ಖಂಡಿಸುವ ನಿರ್ಣಯವನ್ನು ವಿಶ್ವಸಂಸ್ಥೆ ಭದ್ರಾತಾ ಸಮಿತಿ ಅಂಗೀಕರಿಸಿದೆ. 'ಅಣು ಕ್ಲಬ್', ಫ್ರಾನ್ಸ್, ಬ್ರಿಟನ್, ಚೀನಾಗಳು ಈ ನಿರ್ಣಯ ಮಂಡಿಸಿದ್ದವು.

ಭದ್ರತಾ ಸಮಿತಿ ನಿರ್ಣಯ ಎರಡೂ ದೇಶಗಳಿಗೆ - ಅಣ್ವಸ್ತ್ರಕ್ಕೆ ಬಳಸಬಹುದಾದ ವಸ್ತುಗಳ ತಯಾರಿಕೆ ನಿಲ್ಲಿಸಲು, ಅಣ್ವಸ್ತ್ರ ತಯಾರಿಸುವ ಕಾರ್ಯಕ್ರಮ ನಿಲ್ಲಿಸಲು, ಅಣ್ವಸ್ತ್ರಗಳನ್ನು ಕ್ಷಿಪಣಿಗಳ ಮೇಲೆ ಏರಿಸುವುದು ನಿಲ್ಲಿಸಲು, ಮಾತುಕತೆಗಳ ಮೂಲಕ ಕಾಶ್ಮೀರ ಹಾಗೂ ಇತರ ದ್ವಿಪಕ್ಷೀಯ ಸಮಸ್ಯೆಗಳನ್ನು ಬಗೆಹರಿಸಲು, ಅಣ್ವಸ್ತ್ರ ಹರಡುವಿಕೆ ತಡೆ ಒಪ್ಪಂದ (Nuclear Non - Prolifiration Trety - NPT) ಕ್ಕೆ ಅಣ್ವಸ್ತ್ರ ರಹಿತ ದೇಶಗಳಾಗಿ ಸಹಿ ಹಾಕಲು - ಒತ್ತಾಯಿಸಿದೆ. ನಿರ್ಣಯ ಮುಂದುವರೆದು ಈ ಎಲ್ಲಾ ಕ್ರಮಗಳ ಜಾರಿಯನ್ನು ಸಮಿತಿ ಸತತವಾಗಿ ಗಮನಿಸುವುದು ಮತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದೆಂದು ಹೇಳಿದೆ.

ಈ ನಿರ್ಣಯಕ್ಕೆ ನಡೆದ ಚರ್ಚೆಯಲ್ಲಿ ಶಾಶ್ವತ ಸದಸ್ಯರಲ್ಲದ ಇತರ ದೇಶಗಳು 'ಅಣ್ವಸ್ತ್ರ ಕ್ಲಬ್'ನ ಸದಸ್ಯ ದೇಶಗಳ ತಾರತಮ್ಯ ನೀತಿಯನ್ನು ಖಂಡಿಸಿದವು. ಕೆನಡಾ, ಈಜಿಪ್ಟ್, ಇರಾನ್, ಜಾಂಬಿಯಾ ಮುಂತಾದ ದೇಶಗಳ ಪ್ರತಿನಿಧಿಗಳು 'ಅಣ್ವಸ್ತ್ರ ಕ್ಲಬ್'ನ ದೇಶಗಳು ಅಣ್ವಸ್ತ್ರ ನಿಶ್ಯಸ್ತ್ರೀಕರಣದತ್ತ ಅವೇ ಕೊಟ್ಟಿರುವ ಆಶ್ವಾಸನೆಗಳನ್ನು ಪಾಲಿಸುವತ್ತ ಒಂದು ಹೆಜ್ಜೆ ಇಟ್ಟಿಲ್ಲದಿರುವುದು, ಅಣ್ವಸ್ತ್ರ ರಹಿತ ದೇಶಗಳ ಮೇಲೆ ಮಾತ್ರ ಒತ್ತಡ ಹೇರುವುದು ಹಲವು ದೇಶಗಳು ಅಣ್ವಸ್ತ್ರ ಕಾರ್ಯಕ್ರಮ ಆರಂಭಿಸುವುದು, ಮುಂದುವರೆಸಬೇಕಾದ ಪರಿಸ್ಥಿತಿಗೆ ಎಡೆ ಮಾಡಿಕೊಟ್ಟಿದೆ ಎಂದು ಹೇಳಿವೆ.

ಒಟ್ಟಾರೆಯಾಗಿ ಬಿ.ಜೆ.ಪಿ. ಸರ್ಕಾರದ ರಾಜಕೀಯ ಉದ್ದೇಶಪ್ರೇರಿತ ಅಣ್ವಸ್ತ್ರ ಪರೀಕ್ಷಣ ಸ್ಫೋಟ ಭಾರತವನ್ನು ಅಂತರ್‌ರಾಷ್ಟ್ರೀಯವಾಗಿ ಪೇಚಿಗೆ ಸಿಕ್ಕಿಸಿದೆ. ಅಮೇರಿಕ ತನ್ನ ಒತ್ತಡದ ನೀತಿಯಿಂದ ಕೊನೆಗೂ ಭಾರತದ ಮೇಲೆ ಅಂತರ್‌ರಾಷ್ಟ್ರೀಯ ದಿಗ್ಬಂಧನ ವಿಧಿಸುವ ಸಾಧ್ಯತೆಗಳು ಹೆಚ್ಚಿವೆ. ಕಾಶ್ಮೀರ ಸಮಸ್ಯೆಯನ್ನು ಅಂತರ್‌ರಾಷ್ಟ್ರೀಯಗೊಳಿಸಲು ಹವಣಿಸುತ್ತಿದ್ದ ಸಾಮ್ರಾಜ್ಯಶಾಹಿಗಳು ಹಾಗೂ ಪಾಕಿಸ್ತಾನದ ಪ್ರಯತ್ನಗಳಿಗೆ ಕುಮ್ಮಕ್ಕು ಕೊಟ್ಟಂತಾಗಿದೆ. ತಾರತಮ್ಯದ ಎನ್‌ಟಿಪಿ ಒಪ್ಪಂದಕ್ಕೆ ಸಹಿ ಹಾಕಲು ಒತ್ತಡ ಅಗಾಧವಾಗಿ ಹೆಚ್ಚಿದೆ. ಕೆಲವು ವರದಿಗಳ ಪ್ರಕಾರ ಬಿ.ಜೆ.ಪಿ. ನಾಯಕತ್ವ ಮತ್ತು ಅಮೇರಿಕದ ಸರ್ಕಾರದ ನಡುವೆ ಈ ಬಗ್ಗೆ ಗುಪ್ತ ಒಪ್ಪಂದವಾಗಿದೆ ಎಂದು ಹೇಳಲಾಗಿದೆ. ಅಂತರ್‌ರಾಷ್ಟ್ರೀಯ ಒತ್ತಡ, ದಿಗ್ಬಂಧನಗಳ ನೆಪ ಹೇಳಿ ಎನ್.ಪಿ. ಟಿ.ಗೆ ಸಹಿ ಹಾಕುವ ಬಿ.ಜೆ.ಪಿ. ಹುನ್ನಾರವಿದ್ದಂತೆ.

ಭಾರತ ಭದ್ರತಾ ಸಮಿತಿಗೆ ನೀಡಿದ ಅಧಿಕೃತ ಉತ್ತರದಲ್ಲಿ ತಾರತಮ್ಯದ ಎನ್.ಪಿ.ಟಿ.ಗೆ ಈಗಿನ ರೂಪದಲ್ಲಿ ಸಹಿ ಹಾಕುವ ಪ್ರಶ್ನೆ ಇಲ್ಲ. ಪಾಕಿಸ್ತಾನದ ಜೊತೆ ದ್ವಿಪಕ್ಷೀಯ ಮಾತುಕತೆ ಮೂಲಕ ಕಾಶ್ಮೀರ ಸಮಸ್ಯೆ ಸೇರಿದಂತೆ ಎಲ್ಲಾ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದೆ. ಆದರೆ ಮೂರನೇ ಪಕ್ಷದ ಹಸ್ತಕ್ಷೇಪ ಬೇಡ ಎಂದಿದೆ. ಪಾಕಿಸ್ತಾನದ ಜೊತೆ ಅಣ್ವಸ್ತ್ರವನ್ನು ಮೊದಲು ಬಳಸದಿರುವ ಒಪ್ಪಂದಕ್ಕೆ ಪ್ರಯತ್ನ ನಡೆಯುವುದು ಎಂದಿದೆ. ಪಾಕಿಸ್ತಾನ ತನ್ನ ಉತ್ತರದಲ್ಲಿ ಕಾಶ್ಮೀರ ಪ್ರಶ್ನೆ ಮತ್ತು ಅಣ್ವಸ್ತ್ರ ಪರೀಕ್ಷೆ ನಡುವೆ ನೇರ ಸಂಬಂಧ ಕಲ್ಪಿಸದಿರುವುದಕ್ಕೆ ಭದ್ರತಾ ಸಮಿತಿಯನ್ನು ಟೀಕಿಸಿದೆ.

ಈ ನಡುವೆ 'ಅಣ್ವಸ್ತ್ರ ಕ್ಲಬ್'ನ ಸದಸ್ಯರು ಹಾಗೂ ಇತರ ಅಭಿವೃದ್ಧಿ ದೇಶಗಳು ಭಾರತ ವನ್ನು ಈ ವಿಷಯದ ಮೇಲೆ ಮಣಿಸಲು ಯೋಜಿಸುತ್ತಿವೆ. ಅಮೇರಿಕ ಅಂತರ್‌ರಾಷ್ಟ್ರೀಯ ಒತ್ತಡಕ್ಕೆ ಪ್ರಯತ್ನಿಸುತ್ತಿದೆ.

ಹತ್ತು ಸಾವಿರ ಇಂಡೋನೇಶ್ಯನ್ ಕಾರ್ಮಿಕರು ಪೋಲಿಸರ ನಡುವೆ ಘರ್ಷಣೆ

ಇಂಡೋನೇಶ್ಯಾದ ಎರಡನೇ ಅತಿ ದೊಡ್ಡ ನಗರ ಸೂರಾಬಾಯದಲ್ಲಿ ಹತ್ತು ಸಾವಿರ ಕಾರ್ಮಿಕರು ಮತ್ತು ಪೋಲಿಸರ ನಡುವೆ ತೀವ್ರ ಘರ್ಷಣೆ ನಡೆದ ಬಗ್ಗೆ ವರದಿಯಾಗಿದೆ. ದೇಶದ ಅತಿ ದೊಡ್ಡ ಕೈಗಾರಿಕಾ ಕೇಂದ್ರ ಹಾಗೂ ಬಂದರಾದ ಸೂರಾಬಾಯದಲ್ಲಿ ಹತ್ತು ಸಾವಿರ ಮುಷ್ಕರ ನಿರತ ಕಾರ್ಮಿಕರು ಹತ್ತು ಕಿಮಿ ಜಾಥಾ ಸಂಘಟಿಸಿದ್ದರು. ಪೂರ್ವ ಜಾವಾ ಪ್ರದೇಶದ ಪಾರ್ಲಿಮೆಂಟ್ ಬಳಿ ಪೋಲಿಸರು ಜಾಥಾವನ್ನು ತಡೆದಾಗ ಈ ಘರ್ಷಣೆ ಆರಂಭವಾಯಿತು ಎನ್ನಲಾಗಿದೆ.

ಗೃಹೋಪಕರಣ ತಯಾರಿಸುವ ಕಾರ್ಖಾನೆಯೊಂದರ ಕಾರ್ಮಿಕರಾದ ಇವರು ಪೋಲಿಸರ ಜೊತೆ ತೀವ್ರ ಘರ್ಷಣೆಗೆ ಇಳಿದು ಆಮೇಲೆ ಪೋಲಿಸರು ಅವರನ್ನು ಹೋಗಬಿಡಬೇಕಾಯಿತು. ಪ್ರಾದೇಶಿಕ ಪಾರ್ಲಿಮೆಂಟ್ ಬಳಿ ಕಾರ್ಮಿಕರು ಭಾರಿ ರ್‍ಯಾಲಿ ನಡೆಸಿದರು. ಇಂಡೋನೇಶ್ಯಾದ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದ್ದಂತೆ ಕಾರ್ಮಿಕರ ಮುಷ್ಕರಗಳು ಹೆಚ್ಚುತ್ತಿವೆ. ರೂಪಯ್ಯಾದ ಬೆಲೆ ಇಳಿದಿದ್ದು, ಎಲ್ಲಾ ಅವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಇದರ ವಿರುದ್ಧ ಕಾರ್ಮಿಕರು ಬೀದಿಗಿಳಿಯುತ್ತಿದ್ದಾರೆ.

ಈ ನಡುವೆ ರಾಜಧಾನಿ ಜಕಾರ್ತಾಕ್ಕೆ ಭೇಟಿ ನೀಡಿದ ಐಎಂಎಫ್ ಪ್ರತಿನಿಧಿ ತಂಡ ಅವರು ಆಶ್ವಾಸನೆ ನೀಡಿದ್ದ ಒಂದು ಶತಕೋಟಿ ಡಾಲರು ಬಗ್ಗ ಏನೂ ಹೇಳದ ವಾಪಸು ಹೋಗಿದೆ. ಐಎಂಎಫ್ ಪ್ರೇರಿತ ಪೆಟ್ರೋಲ್, ಆಹಾರ, ವಿದ್ಯುತ್ ಬೆಲೆ ಏರಿಕೆ ವಿರುದ್ಧ ಜನ ಬೀದಿಗಿಳಿದಿದ್ದಾರೆ.

ಇಂಡೋನೇಶ್ಯಾದ ತೀವ್ರ ಆರ್ಥಿಕ, ರಾಜಕೀಯ ಬಿಕ್ಕಟ್ಟಿನ ನಡುವೆ ಮೇ 1999 ರಲ್ಲಿ ಚುನಾವಣೆಗಳನ್ನು ನಡೆಸುವುದಾಗಿ ಅಧ್ಯಕ್ಷ ಹಬೀಬಿ ಪ್ರಕಟಿಸಿದ್ದಾರೆ. ತತ್‌ಕ್ಷಣ ಚುನಾವಣೆ ನಡೆಸಲು ತೀವ್ರ ಒತ್ತಾಯ ಬರುತ್ತಿದೆ.

ಇಥಿಯೋಪಿಯಾ ಎರಿಟ್ರಿಯಾ ಕದನ

ಹಲವು ವರ್ಷಗಳಿಂದ ಇದ್ದ ಗಡಿ ವಿವಾದ ಉತ್ತರ ಆಫ್ರಿಕದ ಇಥಿಯೋಪಿಯಾ ಎರಿಟ್ರಿಯಾ ದೇಶಗಳ ನಡುವೆ ಕದನಕ್ಕೆ ಎಡೆ ಮಾಡಿಕೊಟ್ಟಿದೆ. ಮೂರು ವಾರಗಳ ಹಿಂದೆ ಎರಿಟ್ರಿಯಾದ ಸೈನ್ಯ ಇಥಿಯೋಪಿಯಾದ ಒತ್ತಡ-ಪಶ್ಚಿಮ ಪ್ರದೇಶದ ಮೇಲೆ ಆಕ್ರಮಣ ಮಾಡುವುದರೊಂದಿಗೆ ಘರ್ಷಣೆ ಆರಂಭವಾದ ಕಳೆದ ಕೆಲವು ದಿನಗಳಲ್ಲಿ ಎರಡೂ ದೇಶಗಳು ಮಿಲಿಟರಿ ನಾಗರೀಕ ಪ್ರದೇಶಗಳ ಮೇಲೆ ವಿಮಾನದಾಳಿ ನಡೆಸಿವೆ.

ಇಥಿಯೋಪಿಯಾ ವಿಮಾನ ಬಲ ಎರಿಟ್ರಿಯಾದ ಮಿಲಿಟರಿ ಹಾಗೂ ನಾಗರೀಕ ವಿಮಾನ ನಿಲ್ದಾಣದ ಮೇಲೆ ಬಾಂಬ್ ದಾಳಿ ನಡೆಸಿದವು. ಈ ಕದನದಲ್ಲಿ ಇಥಿಯೋಪಿಯಾದ ಒಂದು ಯುದ್ಧ ವಿಮಾನವನ್ನು ಹೊಡೆದುರುಳಿಸಲಾಯಿತು. ಕದನ ತೀವ್ರಗೊಳ್ಳುತ್ತಿಲ್ಲದಿದ್ದರೂ, ನಿಲ್ಲುವ ಸೂಚನೆಗಳು ಕಾಣುತ್ತಿಲ್ಲ. OAU ಆಫ್ರಿಕನ್ ಐಕ್ಯತಾ ಒಕ್ಕೂಟ ಹಾಗೂ ವಿಶ್ವಸಂಸ್ಥೆ ಕದನ ವಿರಾಮಕ್ಕೆ ಒತ್ತಾಯಿಸಿದ್ದು, ಈ ಬಗ್ಗೆ ಪ್ರಯತ್ನಗಳನ್ನು ಆರಂಭಿಸಿವೆ.

ನೈಜೀರಿಯಾ ಸರ್ವಾಧಿಕಾರಿ ಜನರಲ್ ಅಬಾಚಾ ನಿಧನ

ನೈಜೀರಿಯಾವನ್ನು 1993ರಿಂದ ಅತ್ಯಂತ ಕ್ರೂರ ದಮನಕಾಂಡ ರೀತಿಯಲ್ಲಿ ಆಳುತ್ತಿರುವ ಜನರಲ್ ಅಬಾಚಾ ನಿಧನ ಹೊಂದಿದ್ದು, ಸೈನ್ಯದ ಮುಖ್ಯಸ್ಥ ಜನರಲ್ ಅಬೂಬಾಕರ್ ಅಧಿಕಾರ ವಹಿಸಿಕೊಂಡಿದ್ದಾರೆ.

ಜನರಲ್ ಅಬಾಚಾರ ಸರ್ವಾಧಿಕಾರಿ ಆಡಳಿತ ಅಂತರ್‌ರಾಷ್ಟ್ರೀಯ ಗಮನ ಸೆಳೆದಿತ್ತು. ದೇಶದೊಳಗಿನ ಸರ್ವಾಧಿಕಾರಿ ವಿರೋಧಿ ಶಕ್ತಿಗಳು ಹಾಗೂ ಅಂತರ್‌ರಾಷ್ಟ್ರೀಯವಾಗಿ ನೈಜೀರಿಯಾ ಮಿಲಿಟರಿ ಸರ್ವಾಧಿಕಾರದಿಂದ ಪ್ರಜಾಸತ್ತೆಗೆ ಮರಳಬೇಕೆಂದು ಒತ್ತಾಯ ಕೇಳಿ ಬಂದಿದೆ. ಮಿಲಿಟರಿ ಸರ್ವಾಧಿಕಾರಿಯಿಂದಾಗಿ ದೇಶ ಬಿಟ್ಟು 1994ರಲ್ಲಿ ಓಡಿ ಹೋಗಬೇಕಾಗಿ ಬಂದ ನೋಬೆಲ್ ಪ್ರಶಸ್ತಿ ವಿಜೇತ ಲೇಖಕ ಸೋಯಿಂಕಾ ಮಿಲಿಟರಿ ಸರ್ಕಾರ ಮುಂದುವರೆಯುವುದನ್ನು ಖಂಡಿಸಿ, ಪ್ರಜಾಸತ್ತೆಗೆ ಮರಳಬೇಕೆಂದು ಒತ್ತಾಯಿಸಿದ್ದಾರೆ. ಈಗ ಅವರು ಜೆರೂಸಲೇಂನಲ್ಲಿ ವಾಸಿಸುತ್ತಿದ್ದಾರೆ. 1995ರಲ್ಲಿ ನಾಟಕಕಾರ ಕೆನ್-ಸಾರೊ-ವಿವಾ ಹಾಗೂ ಎಂಟು ಇತರ ರಾಜಕೀಯ ವಿರೋಧಿಗಳನ್ನು ಗಲ್ಲಿಗೇರಿಸಿದ್ದು ಅಂತರ್‌ರಾಷ್ಟ್ರೀಯ ಗಮನ ಸೆಳೆದಿತ್ತು. ಯಾವುದೇ ಸಣ್ಣ ರಾಜಕೀಯ ವಿರೋಧವನ್ನು ಸಹಿಸದ ಮಿಲಿಟರಿ ಆಡಳಿತ ಜನರಲ್ ಅಬಾಚಾ ನಂತರ ಉಳಿಯುವುದು ಕಷ್ಟ. ಸೈನ್ಯದ ಒಳಗೆ ಈಗ ಯಾರು ಆಳಬೇಕೆಂಬ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆಯಂತೆ.

1993ರ ಅಧ್ಯಕ್ಷೀಯ ಚುನಾವಣೆಯನ್ನು ಗೆದ್ದಿದ್ದರು ಎನ್ನಲಾದ ಮೊರೂದ್ ಅಬಿಯೆಲಾರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಐಕ್ಯತೆಯ ರಾಷ್ಟ್ರೀಯ ಸರ್ಕಾರ ಮಾಡಬೇಕೆಂದು ಮಿಲಿಟರಿ ಆಡಳಿತಕ್ಕೆ ವಿರೋಧವಾದ ಶಕ್ತಿಗಳು ಪ್ರಯತ್ನಿಸುತ್ತಿವೆ.

ಐಟಿಐ ಗುತ್ತಿಗೆ ಕಾರ್ಮಿಕರ ಮೇಲಿನ ಪೋಲೀಸ್ ಹಲ್ಲೆಗೆ ಸಂಘದ ಖಂಡನೆ

ಬೆಂಗಳೂರಿನ ಸಾರ್ವಜನಿಕ ಉದ್ದಿಮೆ ಐಟಿಐ ಕಾರ್ಖಾನೆಯಲ್ಲಿ ಕೆಲಸದಿಂದ ತೆಗೆದು ಹಾಕಲಾಗಿದ್ದ ಗುತ್ತಿಗೆ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಒತ್ತಾಯಿಸಿ ಸತ್ಯಾಗ್ರಹಿಗಳತ್ತ ನುಗ್ಗಿ ಮನಬಂದಂತೆ ಲಾಠಿಛಾರ್ಜ್ ಮಾಡಿ 17 ಮಹಿಳೆಯರು ಸೇರಿದಂತೆ 52 ಕಾರ್ಮಿಕರಿಗೆ ತೀವ್ರ ಸ್ವರೂಪದ ಗಾಯವಾಗುವಂತೆ ಹಲ್ಲೆ ನಡೆಸಿರುವುದನ್ನು ಐಟಿಐ ಡೈಲಿವೇಜಸ್ ವರ್ಕರ್ಸ್ ಯೂನಿಯನ್ ಬಲವಾಗಿ ಖಂಡಿಸಿದೆ.

ಸತ್ಯಾಗ್ರಹಿಗಳ ಟೆಂಟ್ ಮತ್ತು ಹಾಸಿಗೆಗಳಿಗೆ ಆಡಳಿತ ವರ್ಗದ ಅಣತಿಯಂತೆ ಬೆಂಕಿ ಹಾಕಿ ಸತ್ಯಾಗ್ರಹಿಗಳ ಮೇಲೆ ಲಾಠಿಚಾರ್ಜ್ ಮುಖಾಂತರ ವಿನಾ ಕಾರಣ ಹಲ್ಲೆಗೆ ಕಾರಣರಾಗಿ ಕಾರ್ಮಿಕರ ಮೇಲೆ ಸುಳ್ಳು ಮೊಕದ್ದಮೆ ಹೂಡಿರುವ ಬಾಣಸವಾಡಿ ಪೋಲೀಸ್ ಠಾಣೆಯ ಪೋಲಿಸ್ ಅಧಿಕಾರಿ ದೊಡ್ಡಮುನಿ ದಶರಥ್‌ರನ್ನು ಕೂಡಲೇ ಸೇವೆಯಿಂದ ಅಮಾನತ್ತುಗೊಳಿಸುವಂತೆ ಸಂಘವು ಪೋಲಿಸ್ ಕಮಿಷನರ್‌ರನ್ನು ಒತ್ತಾಯಿಸಿದೆ.

ಐಟಿಐಯಲ್ಲಿ ಹಲವಾರು ವರ್ಷಗಳಿಂದ ಗುತ್ತಿಗೆ ಕಾರ್ಮಿಕರಾಗಿ ದುಡಿಯುತ್ತಿದ್ದ ಕಾರ್ಮಿಕರನ್ನು ಖಾಯಂಗೊಳಿಸುವಂತೆ, ಸಮಾನ ಕೆಲಸಕ್ಕೆ ಸಮಾನ ವೇತನ ಕೋರಿ ಹಾಗೂ ಉಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸುವಂತೆ, ಒತ್ತಾಯಿಸಿದ ಹಾಲಿ ಕಾರ್ಮಿಕರನ್ನು ತೆಗೆದು ಹೊಸ ಕಾರ್ಮಿಕರ ನೇಮಕವನ್ನು ವಿರೋಧಿಸಿ ಸತ್ಯಾಗ್ರಹ ನಡೆಸುತ್ತಿದ್ದರು. ಇದನ್ನು ಸಹಿಸದ ಆಡಳಿತ ವರ್ಗ ಪೋಲಿಸ್ ಜೊತೆ ಸೇರಿ ಕಾನೂನು ಉಲ್ಲಂಘಿಸಿದೆ ಎಂದು ಸಂಘ ಆರೋಪಿಸಿದೆ.

ಮಹಿಳಾ ಸಂಘಟನೆ - ವಿಜಾಪುರ ಜಿಲ್ಲಾ ಸಮ್ಮೇಳನ

ವಿಜಾಪುರ : ಮೇ 29ರಂದು ಜನವಾದಿ ಮಹಿಳಾ ಸಂಘಟನೆಯ 3ನೇ ಜಿಲ್ಲಾ ಸಮ್ಮೇಳನ ರೈತ ಸಂಘದ ಕಾರ್ಯಾಲಯದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಸುರೇಖ ರಜಪೂತ್ ವಹಿಸಿದ್ದರು.

ಕೆ. ನೀಲಾ, ಕಾರ್ಯದರ್ಶಿ ಜನವಾದಿ ರಾಜ್ಯ ಸಮಿತಿ, ಇವರು ಉದ್ಘಾಟನೆ ಮಾಡಿ ಮಾತನಾಡುತ್ತಾ ಮಹಿಳೆಯರಿಗೆ ಶೇ. 33 ಮೀಸಲಾತಿ ಇರಬೇಕು ಎಂದರು. ಮಹಿಳೆಯರ ಮೇಲೆ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ, ಪ್ರಕರಣಗಳಲ್ಲಿ ಕೂಲಿ ಮಾಡುತ್ತಿರುವ ಎಷ್ಟೋ ಮಹಿಳೆಯರು ತಮ್ಮ ಮರ್ಯಾದೆಗೆ ಅಂಜಿ ಫಿರ್ಯಾದು ಸಹ ಕೊಡಲಾಗುತ್ತಿಲ್ಲ, ಇದರ ಬಗ್ಗೆ ಸರ್ಕಾರ ಕಾನೂನು ತರಬೇಕೆಂದು ಒತ್ತಾಯಿಸಿದರು. ಈ ವ್ಯವಸ್ಥೆ ವಿರುದ್ಧ ಮಹಿಳೆಯರು ಪಕ್ಷ, ಜಾತಿ, ಧರ್ಮದ ಬೇಧವಿಲ್ಲದೆ ಎಲ್ಲರೂ ಜನವಾದಿ ಮಹಿಳಾ ಸಂಘಟನೆ ಬೆಳೆಸಿ ಈ ಕೆಟ್ಟ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಬೇಕೆಂದು ಕರೆಕೊಟ್ಟರು.

ಜಯಲಕ್ಷ್ಮಿಯರನಾಳ ಮಾಧ್ಯಮ ಶಿಕ್ಷಣ ಅಧ್ಯಕ್ಷರು ಇವರು ಮಾತನಾಡುತ್ತಾ ಕೇಂದ್ರ ಸರ್ಕಾರ ಬಿಜೆಪಿ ಅಣುಬಾಂಬ್ ಸ್ಫೋಟ ಮಾಡಲು ಕೋಟ್ಯಾಂತರ ಹಣ ಖರ್ಚು ಮಾಡುವ ಬದಲು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಮಹಿಳಾ ಕಲ್ಯಾಣ ಕೆಲಸಗಳನ್ನು ಮಾಡಬೇಕೆಂದು ಅವರು ಸರ್ಕಾರಕ್ಕೆ ಒತ್ತಾಯಿಸಿದರು. ಆರ್.ಎಚ್. ಕಲಾದಗಿ ಹಾಗೂ ಭೀಮಸಿ ಕಲಾದಗಿ ಜನವಾದಿ ಮಹಿಳಾ ಸಂಘಟನೆಯ ಘಟಕ ರಚಿಸಿ ಹಕ್ಕಿಗಾಗಿ ಹೋರಾಟ ಮಾಡಬೇಕೆಂದು ಕರೆ ಕೊಟ್ಟರು

ಹೊಸ ಸಮಿತಿ :ಸುರೇಖಾ ರಜಪೂತ, ಅಧ್ಯಕ್ಷರು, ದುಂಡವ್ವ ಗರಸಂಗಿ, ಇರವ್ವ ಹಜೇರಿ, ಜಾಂದಬಿ ತಿಡಗುಂದಿ-ಉಪಾಧ್ಯಕ್ಷರು, ಜೈತುಂಬಿ ಇ. ಸಧಾಪ-ಕಾರ್ಯದರ್ಶಿ, ಎಸ್.ಎಸ್. ಬ್ಯಾಳಿ, ಜಿ. ಮಣ್ಣಕೇರಿ, ಸಿ.ಸಿ. ಕುಮ್ಮಗಿ-ಸಹ ಕಾರ್ಯದರ್ಶಿ, ಲಕ್ಷ್ಮಿ ಮೈಲಾರಿ-ಖಜಾಂಚಿ ಮತ್ತು 21 ಜನ ಕಮಿಟಿ ಸದಸ್ಯರು.

ಕೈಮಗ್ಗ ನೇಕಾರರ ಸತ್ಯಾಗ್ರಹ ಅಂತ್ಯ

ಹುಬ್ಬಳ್ಳಿ : ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಪ್ರಧಾನ ಕಛೇರಿಯ ಎದುರು ಮೇ 28 ರಿಂದ ಆರಂಭವಾಗಿದ್ದ ಕೈಮಗ್ಗ ನೇಕಾರರ ಅನಿರ್ಧಿಷ್ಟ ಸಾಮೂಹಿಕ ಸತ್ಯಾಗ್ರಹವು ಮೇ 31ರಂದು ಮುಕ್ತಾಯವಾಯಿತು. ನಿಗಮದ ಅಧ್ಯಕ್ಷರೂ, ರಾಣೆಬೆನ್ನೂರು ಕ್ಷೇತ್ರದ ಶಾಸಕರೂ ಆಗಿರುವ ವಿ.ಎಸ್. ಕರ್ಜಗಿ ನೇಕಾರರ ಮುಖಂಡರೊಂದಿಗಿನ ಚರ್ಚೆಯ ನಂತರ ನೀಡಲಾದ ಲಿಖಿತ ಭರವಸೆಯ ಆಧಾರದಲ್ಲಿ ಕರ್ನಾಟಕ ರಾಜ್ಯ ಕೈಮಗ್ಗ ನೇಕಾರರ ಕಾರ್ಮಿಕರ ಸಮನ್ವಯ ಸಮಿತಿಯು ಸತ್ಯಾಗ್ರಹ ಹಿಂತೆಗೆದುಕೊಂಡಿತು.

ಆಡಳಿತ ವರ್ಗವು ಕೆಳಗಿನವುಗಳ ಜೊತೆ 13 ಬೇಡಿಕೆಗಳನ್ನು ಒಪ್ಪಿಕೊಂಡಿದೆ.

ನೇಕಾರರ ಕೂಲಿ ದರಗಳನ್ನು ಪರಿಷ್ಕರಿಸುವ ಮೊದಲು ತಪ್ಪದೆ ನೇಕಾರರ ಪ್ರತಿನಿಧಿಗಳೊಂದಿಗೆ ಚರ್ಚಿಸುವುದು,

ನಿಗಮದ ಅಡಿಯಲ್ಲಿ ದುಡಿಯುತ್ತಿರುವ ನೇಕಾರರ ಮರಣದ ನಂತರ ನೀಡುವ ಪರಿಹಾರ ಹಣವನ್ನು 1000 ರೂಪಾಯಿಯಿಂದ 1500 ರೂ.ಗೆ ಹೆಚ್ಚಿಸುವುದು ಮತ್ತು ಯಾವುದೇ ಷರತ್ತು ಹಾಕದೇ ಪರಿಹಾರ ನೀಡುವುದು.

ನಿಗಮದ ಸ್ವಾಧೀನದಲ್ಲಿರುವ ಖಾಲಿ ನಿವೇಶನಗಳನ್ನು ನಿಮಗದ ಅರ್ಹ ನೇಕಾರರಿಗೆ ವಿತರಣೆ ಮಾಡುವುದು ಹಾಗೂ ವಸತಿಹೀನ ನೇಕಾರರನ್ನು ಗುರುತಿಸಿ ಅವರಿಗೆ ವಸತಿಸಹಿತ ಕಾರ್ಯಾಗಾರಗಳನ್ನು ಕಟ್ಟಿಕೊಡಲು ವಿವರವಾದ ಸಮೀಕ್ಷೆಯನ್ನು ಕೈಗೊಳ್ಳುವುದು.

ನಿಗಮದ ನೇಕಾರರಿಗೆ ನೀಡಲಾಗುವ ಹಬ್ಬ ಹಾಗೂ ಬಟ್ಟೆ ಖರೀದಿ ಮುಂಗಡವನ್ನು 1000 1500 ರೂ.ಗೆ ಹೆಚ್ಚಿಸುವುದು.

ನಿಗಮದ ಪ್ರಧಾನ ಕಛೇರಿಯಲ್ಲಿ ನೇಕಾರರ ಕುಂದುಕೊರತೆ ನಿವಾರಣಾ ಘಟಕವನ್ನು ಆರಂಭಿಸುವುದು.

ನೇಕಾರರ ವೃದ್ಧಾಪ್ಯ ವೇತನ, ಕಲ್ಯಾಣ ನಿಧಿ, ತುಟ್ಟಿ ಭತ್ಯೆ, ಹೆರಿಗೆ ಭತ್ಯೆ, ಹಬ್ಬಗಳ ರಜಾ ಸಂಬಳ, ಸಾಲಮನ್ನ ಮೊದಲಾದ ಬೇಡಿಕೆಗಳನ್ನು ಸರ್ಕಾರವೇ ಈಡೇರಿಸಬೇಕಾಗಿರುವುದರಿಂದ ರಾಜ್ಯ ಜವಳಿ ಸಚಿವರೇ ಅಧ್ಯಕ್ಷರರಾಗಿರುವ ನೇಕಾರರ ಸಲಹಾ ಸಮಿತಿಯ ಸಭೆಯನ್ನು ಕರೆಯಲು ಮಾನ್ಯ ಸಚಿವರಲ್ಲಿ ವಿನಂತಿಸಲಾಗುವುದು ಎಂದು ಅಧ್ಯಕ್ಷರು ಭರವಸೆ ನೀಡಿದ್ದಾರೆ.

ಚರ್ಚೆಯಲ್ಲಿ ನಿಗಮದ ಪರವಾಗಿ ವ್ಯವಸ್ಥಾಪಕ ನಿರ್ದೇಶಕರಾದ ಎ.ಪಿ. ಜೋಶಿ, ಜಂಟಿ ನಿರ್ದೇಶಕರಾದ ಬಿ.ವಿ. ಕುಲಕರ್ಣಿ ಹಾಗೂ ಇತರ ಹಿರಿಯ ಅಧಿಕಾರಿಗಳು ಹಾಜರಿದ್ದರು. ನೇಕಾರರ ಪರವಾಗಿ ಸಮನ್ವಯ ಸಮಿತಿಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಮುಖಂಡರಾದ ಡಿ.ಎಂ. ಕಲಾಸಿ, ಸದಾಶಿವ ಗೋಂದಕರ, ಪ್ರಕಾಶ ರಾವಳ, ಈಗಪ್ಪ ಗಡಿಗಿ, ನಿಂಗಪ್ಪ ಮಾಳೋದೆ, ಸಂಗಪ್ಪ ಸಂಗಮದ, ಹನಮಂತಪ್ಪ ಕದರಮಂಡಲಗಿ, ಫಕ್ಕೀರಪ್ಪ ವಿಭೂತಿ, ಎ.ಎ. ಮುಲ್ಲಾ, ವಿ.ಎಸ್. ಮದ್ದಿ, ಪುಂಡಲೀಕ ಚೀನಾಳ, ನಾಗಪ್ಪ ಕುಂಬಾರ, ವಿರುಪಾಕ್ಷಪ್ಪ ಬಣಕಾರ, ನಾಗಮ್ಮ ಜೋಗಿನ, ಕಳಕವ್ವ ಭಂಡಾರಿ, ಮಂಜುಳಾ ಗೋಂದಕರ ಮತ್ತು ಸುಮಿತ್ರವ್ವ ಮ್ಯಾಳಿ ಭಾಗವಹಿಸಿದ್ದರು.

ಮೇ 28ರಂದು ಸತ್ಯಾಗ್ರಹವನ್ನು ಆರಂಭಿಸುವ ಮೊದಲು ಹುಬ್ಬಳ್ಳಿ ರೈಲು ನಿಲ್ದಾಣದಿಂದ ಬೃಹತ್ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಬಿಜಾಪುರ, ಬಾಗಲಕೋಟೆ, ಬೆಳಗಾಂವ್, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಿಂದ ಆಗಮಿಸಿದ್ದ ಒಂದು ಸಾವಿರಕ್ಕೂ ಹೆಚ್ಚು ನೇಕಾರ ಸ್ತ್ರೀ ಪುರುಷರು ಮೆರವಣಿಗೆ ಹಾಗೂ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಾ॥ ಎನ್.ಕೆ. ಉಪಾಧ್ಯಾಯರು ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡಿದರು. ಸ್ಥಳೀಯ ಸಿ.ಐ.ಟಿ.ಯು. ಮುಖಂಡರಾದ ಎಂ.ಬಿ. ಕಟ್ಟಿ, ಸಿ.ಆರ್. ಭಟ್, ಡಿ.ಜಿ. ಗೋಂದಕರ್, ವಿಮಾ ನೌಕರರ ಸಂಘಟನೆಯ ಮುಖಂಡರಾದ ಆರ್.ಎಚ್. ಆಯಿ ಮತ್ತು ಡಿ.ವೈ.ಎಫ್.ಐ. ಮುಖಂಡ ಕೆ. ಮಹಂತೇಶ್ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಮಾತನಾಡಿ ನೇಕಾರರ ಬೇಡಿಕೆಗಳನ್ನು ಈಡೇರಿಸುವಂತೆ ನಿಗಮದ ಆಡಳಿತ ವರ್ಗವನ್ನು ಒತ್ತಾಯಿಸಿದರು.

ಜಾತ್ಯಾತೀತ ಶಕ್ತಿಗಳಿಗೆ ಜಯ: ಬಿಜೆಪಿ ತಂತ್ರಗಳಿಗೆ ತಿರಸ್ಕಾರವೆಂದು ಸಿಪಿಐ(ಎಂ) ವಿಶ್ಲೇಷಣೆ

ಕರ್ನಾಟಕದಲ್ಲಿನ ಉಪ ಚುನಾವಣಾ ಫಲಿತಾಂಶವು ಜಾತ್ಯಾತೀತ ಶಕ್ತಿಗಳಿಗೆ ಜನತೆ ನೀಡಿದ ಜಯವೆಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ವಿಶ್ಲೇಷಿಸಿದೆ.

ಬಿ.ಜೆ.ಪಿಯು ಅಣ್ವಸ್ತ್ರ ಸ್ಫೋಟಿಸಿ ಯುದ್ಧೋನ್ಮಾದ ಸೃಷ್ಟಿಸಿ ದುರ್ಲಾಭಗಳಿಸಲು ನಡೆಸಿದ ಪ್ರಯತ್ನಗಳನ್ನೂ ಹಾಗೂ ಈ ಪಕ್ಷದ ಜನವಿರೋಧಿ ನೀತಿಗಳನ್ನು ಜನತೆಯು ತಿಳಿಯತೊಡಗಿದೆ. ಮತ್ತು ಬಿಜೆಪಿ ತಂತ್ರಗಳಿಗೆ ಬಲಿ ಬೀಳದೆ ತಿರಸ್ಕರಿಸಿದೆ ಎಂದಿರುವ ರಾಜ್ಯ ಸಮಿತಿಯು ಈ ಪ್ರಕ್ರಿಯೆಯು ಇನ್ನು ಹೆಚ್ಚು ವ್ಯಾಪಕಗೊಳ್ಳಬೇಕು ಎಂದು ಆಶಿಸಿದೆ.

ಈ ಚುನಾವಣೆಗಳ ಫಲಿತಾಂಶದಿಂದ ಈಗಲಾದರೂ ಲೋಕಶಕ್ತಿ ಪಾಠ ಕಲಿತು ಕೋಮುವಾದಿ ಶಕ್ತಿಗಳ ಸಹಯೋಗದಿಂದ ಹೊರಬಂದು, ಜಾತ್ಯಾತೀತ ಶಕ್ತಿಗಳ ಪ್ರಯತ್ನದತ್ತ ಧಾವಿಸಬೇಕೆಂದು ಸಿಪಿಐ (ಎಂ) ಕಾರ್ಯದರ್ಶಿ ಮಂಡಳಿ ತಿಳಿಸಿದೆ.





ಸಮ್ಮೇಳನದ ವೇದಿಕೆ ಮತ್ತು ಸಜ್ಜುಗೊಂಡ ಸಮ್ಮೇಳನದ ಆವರಣ



ಸುಶೀಲಾ ಗೋಪಾಲನ್‌ರವರಿಂದ ಧ್ವಜಾರೋಹಣ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 5ನೇ ಸಮ್ಮೇಳನದ ಮೊದಲ ದಿನ

ಸಮ್ಮೇಳನದ ಪ್ರತಿನಿಧಿಗಳು



ಉದ್ಘಾಟನಾ ಅಧಿವೇಶನದಲ್ಲಿ ಪ್ರತಿನಿಧಿಗಳು



........ಲೆಕ್ಕಾಚಾರ ತಲೆಕೆಳಗಾಯಿತು

ಪುಟ 1 ರಿಂದ

ಜನತೆ ಎಚ್ಚರಿಸಿದ್ದಾರೆ.

ಯಾಕೆ ಈ ತರದ ತೀರ್ಪನ್ನು ಜನತೆಕೊಟ್ಟರು? ಎಂದು ವಿಶ್ಲೇಷಿಸಿದಾಗ ತಿಳಿದುಬರುವ ಕಾರಣಗಳು ಹೀಗಿವೆ:

ಒಂದು, ಜನತೆಯ ಅಪೇಕ್ಷೆ ಇದ್ದದ್ದು ಬಿಜೆಪಿ ಪಕ್ಷವು ದೇಶಕ್ಕೆ ಭದ್ರ ಸರಕಾರವನ್ನು ಕೊಡುವುದು ಎಂದು. ಆದರೆ, ಅದರ ಅನುಭವ ಅತ್ಯಂತ ಅಸ್ಥಿರ ಸರಕಾರವನ್ನು ಜನತೆ ಕಂಡಿದ್ದಾರೆ.

ಎರಡು, ದೀರ್ಘಕಾಲದಲ್ಲಿ ಬಿಜೆಪಿ ಪಕ್ಷವ ವಿರೋಧ ಪಕ್ಷವಾಗಿದ್ದು ಅದು ಬೆಲೆಯೇರಿಕೆಯ ಕುರಿತು ತೀವ್ರ ಧೋರಣೆಯನ್ನು ಪ್ರತಿಪಾದಿಸುತ್ತಿತ್ತು. ಆದರೆ ಬಿಜೆಪಿ ಸರಕಾರದ ನಿಜರೂಪ ಅದರ ಜೂನ್ 1 ಬಜೆಟ್ ಮತ್ತು ಮೇ 30 ರ ರೈಲ್ವೆ ಬಜೆಟ್‌ನಿಂದ ಬಯಲಿಗೆ ಬಂದು ಜನರಿಗೆ ಬಿಜೆಪಿಯ ನಿಜಬಣ್ಣ ತಿಳಿಯಿತು.

ಮೂರು, ಜನ ತಮ್ಮಜೀವನದ ಭದ್ರತೆಗಾಗಿ ಕಾಯುತ್ತಿತ್ತು, ಆದರೆ ಬಿಜೆಪಿಯು 'ಅಣುಬಾಂಬು' ಸ್ಫೋಟ ಮಾಡಿ ಭದ್ರತೆಯ ಕುರಿತು ವಿಪರೀತ ವ್ಯಾಖ್ಯಾನವನ್ನು ಕೊಟ್ಟಿತು.

ನಾಲ್ಕು, 2 ದಶಕಗಳಿಂದ ಚೀನಾ ಗಡಿ ಶಾಂತವಾಗಿರುವುದನ್ನು ಕೇವಲ ಕೆಲವು ದಿನಗಳಲ್ಲಿ ಕದಡಿಸಿ, ಗಡಿ ಯುದ್ಧಕ್ಕೂ 'ಚೀನಾ ಭಾರತದ ವೈರಿ ನಂಬರ್ ಒನ್' ಎಂದು ಸಾರಿ ಬಿಗುವಿನ ವಾತಾವರಣವನ್ನು ಹೆಚ್ಚಿಸಿತು.

ಐದು, ಅಣು ಸ್ಫೋಟಗಳನ್ನು ಮಾಡಿ, ಅದನ್ನು ತೋರಿಸಿ 'ಪಾಕಿಸ್ತಾನದ ಜತೆ ನಾವು ಯುದ್ಧ ಹೂಡಲು ಕೂಡಾ ತಯಾರು ಎಂದು ಹೂಂಕರಿಸಲು ಶುರು ಮಾಡಿತು ಬಿಜೆಪಿ ಸರಕಾರ.

ಹಿಂದಿನ ಕಾಂಗ್ರೆಸ್ ಸರಕಾರ ಹಾಗೂ ಅನಂತರರ ದಿಲ್ಲಿಯನ್ನು ಆಳಿದ ಸಂಯುಕ್ತರಂಗದ ಸರಕಾರಗಳು ಗಡಿಯಲ್ಲಿ ಶಾಂತಿಯನ್ನು ಶಾಶ್ವತವಾಗಿ ಸ್ಥಾಪಿಸುವತ್ತ ದೃಢವಾದ ಹೆಜ್ಜೆಗಳನ್ನು ಇಡುತ್ತಾ ಬರುತ್ತಿದ್ದವು. ಅದನ್ನೆಲ್ಲಾ ಏಕಾಏಕಿಯಾಗಿ ಬಿಜೆಪಿ ತಮ್ಮ ಗುಪ್ತ ಕಾರ್ಯಕ್ರಮ'ದ ಭಾಗವಾಗಿ ಕೆಡಿಸಿಹಾಕಿದರು.

ಇನ್ನೂ ಒಂದು ಕಾರಣ ಇದೆ; ಬಿಜೆಪಿಯು ಚುನಾವಣಾ ಸಮಯದಲ್ಲಿ ಜನತೆಯ ಮುಂದೆ ಇರಿಸಿದ ಕಾರ್ಯಕ್ರಮ, ಅವರು ಈಗ ಅನುಷ್ಠಾನ ಮಾಡಿದ 'ರಾಷ್ಟ್ರೀಯ ಕಾರ್ಯಕ್ರಮ ಇವೆರಡಕ್ಕೆ ಏನೇನೂ ಸಂಬಂಧ ಇಲ್ಲ.

ಬಿಜೆಪಿ ಸರಕಾರವು ಬಹಿರಂಗವಾಗಿ ರಾಷ್ಟ್ರೀಯ ಕಾರ್ಯಕ್ರಮವನ್ನು ಜಾರಿ ಮಾಡಲು ಬದ್ಧರು ಎಂದು ಹೇಳುವಾಗಲೇ, ಎಲ್ಲಾ ಬಿಜೆಪಿ ಮಂತ್ರಿಗಳು ತಾವು ತಮ್ಮ ಚುನಾವಣಾ ಘೋಷಣೆಯಲ್ಲಿ ಪ್ರಕಟಪಡಿಸಿದ ಧೋರಣೆಗಳಿಗೂ ನಾವು ಬಿಜೆಪಿ ಪಕ್ಷದವರಾಗಿ ಬದ್ಧರು ಎಂದು ಸಾರುತ್ತಿದ್ದಾರೆ.

ಅವರ ಸಂಘ ಪರಿವಾರದವರು ಬಜರಂಗ ದಳದವರು/ವಿಶ್ವ ಹಿಂದೂ ಪರಿಷತ್‌ನವರು - ಎಲ್ಲಕ್ಕಿಂತಲೂ ಹೆಚ್ಚಾಗಿ ಆರ್.ಎಸ್.ಎಸ್.ನವರು ರಾಮ ಜನ್ಮಭೂಮಿ ವಿವಾದ ಸ್ಥಳದಲ್ಲಿ ಶ್ರೀರಾಮ ಮಂದಿರವನ್ನು ಕಟ್ಟುವ, ಕಾಶ್ಮೀರದಲ್ಲಿ ಜಾರಿಯಿರುವ ಸೆಕ್ಷನ್ 370 ಮತ್ತು ಸಾಮಾನ್ಯ ಸಿವಿಲ್ ಕೋಡ್‌ಗಳನ್ನು ಕುರಿತು ತೀವ್ರ ಪ್ರಚಾರ ಮಾಡುತ್ತಿದ್ದಾರೆ.

ಮಾತ್ರವಲ್ಲ, ರಾಮ ಮಂದಿರಕ್ಕೆ ಬೇಕಾದ ಎಲ್ಲಾ ಕಟ್ಟಡದ ಭಾಗಗಳನ್ನು ಬೇರೆ ಬೇರೆ ವರ್ಕ್‌ಶಾಪ್‌ಗಳಲ್ಲಿ ಕೆತ್ತಿ ತಯಾರಿಸುತ್ತಿದ್ದಾರೆ.

ಭಾರತದ ಜನತೆ ಹಾಗೂ ಕರ್ನಾಟಕದ ಜನತೆ ಮೆಲ್ಲನೆ ಬಿಜೆಪಿ-ಲೋಕಶಕ್ತಿಗಳ ಮತೀಯ ರಾಜಕೀಯವನ್ನು ಅರ್ಥ ಮಾಡಿಕೊಳ್ಳಲು ಆರಂಭಿಸಿದ್ದಾರೆ - ಎಂಬುದು ಈ ಉಪಚುನಾವಣೆಗಳಿಂದ ಸ್ಪಷ್ಟವಾಗಿದೆ.

ವಿಚಾರ ಸಂಕಿರಣ

ಪುಟ 6 ರಿಂದ

ಸಂಘಟನೆಯ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಬೃಂದಾಕಾರಟ್ ಅವರು, ನ್ಯಾಯಾಂಗದಲ್ಲೂ ಅನೇಕ ಬಾರಿ ಮಹಿಳೆಗೆ ನ್ಯಾಯ ದೊರಕುತ್ತಿಲ್ಲ. ಬದಲಿಗೆ, ಅನ್ಯಾಯಕ್ಕೊಳಗಾದ ಮಹಿಳೆಯನ್ನೇ ಅನುಮಾನದಿಂದ ನೋಡಲಾಗುತ್ತಿದೆ ಎಂದು ವಿಷಾದಿಸಿದರು.

ನ್ಯಾಯಾಂಗದ ಕೆಲವು ತೀರ್ಪುಗಳು ಸಂವಿಧಾನವನ್ನು ಉಲ್ಲಂಘಿಸಿವೆ. ಕೆಲವು ನ್ಯಾಯಾಧೀಶರು ಪೂರ್ವಾಗ್ರಹ ಪೀಡಿತರಾಗಿದ್ದಾರೆ. ಲೋಪ ಇರುವ ಇತರೆ ವ್ಯವಸ್ಥೆಗಳನ್ನು ದೂರುವ ನಾವು ನ್ಯಾಯಾಂಗ ವ್ಯವಸ್ಥೆ ತಪ್ಪು ಮಾಡಿದಾಗ ಯಾಕೆ ದೂರಬಾರದು ಎಂದೂ ಅವರು ಪ್ರಶ್ನಿಸಿದರು.

ನ್ಯಾಯವಾದಿ ಗೀತಾದೇವಿ ಅವರು ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿದಲ್ಲಿ ಮಹಿಳೆಯರ ಬಗೆಗಿನ ಕಾನೂನಿನಲ್ಲಿ ಸುಧಾರಣೆ ಮಾಡಲು ಸಾಧ್ಯ ಎಂದರು.

ಆರಂಭದಲ್ಲಿ ಹಿರಿಯ ಲೇಖಕ ಜಿ.ಕೆ.ಗೋವಿಂದರಾವ್ ಅವರು ಸ್ವಾಗತಿಸಿದರು. ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ನೀಲ ಪ್ರಸ್ತಾವನೆ ಮಾಡಿದರು. ವಕೀಲರ ಯೂನಿಯನ್ ಸಂಚಾಲಕ ಎಚ್.ಎನ್. ನಾಗಮೋಹನದಾಸ್ ವಂದನೆ ಅರ್ಪಿಸಿದರು.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27